# ಗಾನಯೋಗಿ ಪಂಚಾಕ್ಷರಿ ಗವಾಯಿಗಳು : ಸವಿನೆನಪು



ಜನ್ಮ ಶತಮಾನೋತ್ಸವ–1992

**ವಿಚಾರ ಸಂಕಿರಣ, ದಿನಾಂಕ 20–5–1992**

**ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ**

14/3, ನೃಪತುಂಗ ರಸ್ತೆ, ಬೆಂಗಳೂರು-560 002

# ಗಾನಯೋಗಿ ಪಂಚಾಕ್ಷರಿ ಗವಾಯಿಗಳು : ಸವಿನೆನಪು

ಜನ್ಮ ಶತಮಾನೋತ್ಸವ–1992


ಸಂಪಾದಕ :

ಡಾ. ನಾಗರಾಜರಾವ್ ಹವಲ್ದಾರ್



**ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ**

14/3, ನೃಪತುಂಗ ರಸ್ತೆ, ಬೆಂಗಳೂರು-560 002

A Homage to GANAYOGI PANCHAKSHARI GAWAI : C llection of papers presented at the function held by the Karnataka Sangeetha Nrithya Academy at Dharwad on 20-5-92 to mark the birth centenary of the artiste and published by he Registrar, Karnataka Sangeetha Nrithya Academy.

First Impresion 1993 1000 copies,

Price : Rs. 5/-

ಮುದ್ರಕರು :


ರಶ್ಮಿ ಮುದ್ರಣ

ಸುಧಾಮನಗರ, ಬೆಂಗಳೂರು-೫೬೦ ೦೨೭



ಪಂಡಿತ್ ಪಂಚಾಕ್ಷರಿ ಗವಾಯಿಗಳು





ದಿನಾಂಕ 20-5-92 ರಂದು ಧಾರವಾಡದಲ್ಲಿ ನಡೆದ ಸಮಾರಂಭದ ಚಿತ್ರಗಳು

# ಎರಡು ಮಾತು

ಸಂಗೀತ ವಿಶ್ವದಲ್ಲಿ ಪೂಜ್ಯಶ್ರೀ ಪಂಚಾಕ್ಷರಿ ಗವಾಯಿಗಳ ಹೆಸರು ಅವಿಸ್ಮರಣೀಯ. ಶ್ರೀ ಗವಾಯಿಗಳು ಹುಟ್ಟುಕುರುಡರಾಗಿದ್ದರೂ ಅವರ ಸಂಗೀತ ಮಹೋನ್ನತ ಸೇವೆ ಅನುಪಮ; ಅಮೋಘ; ಅನುಕರಣೀಯ. ಈ ದಿಸೆಯಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ಪಂಚಾಕ್ಷರಿ ಗವಾಯಿಗಳ ಜನ್ಮಶತಮಾನೋತ್ಸವದ ಅಂಗವಾಗಿ ದಿನಾಂಕ 20–5–92 ರಂದು ಧಾರವಾಡದಲ್ಲಿ ವಿಚಾರ ಸಂಕಿರಣ, ಸಂಗೀತೋತ್ಸವವನ್ನು ನಡೆಸಿತು. ಆದರಲ್ಲಿ ನಾಡಿನ ಹಿರಿಯ ಸಾಹಿತಿಗಳು, ಕಲಾವಿಮರ್ಶಕರು, ಸಂಗೀತಗಾರರು ಶ್ರೀ ಗವಾಯಿಗಳ ಬಹುಮುಖ ಸೇವೆಯ ಬಗ್ಗೆ ಮಾಡಿದ ಭಾಷಣ ಗಳನ್ನು ಸಂಗ್ರಹಿಸಿ ಈ ಕಿರುಹೊತ್ತಿಗೆಯನ್ನು ಹೊರತರಲಾಗಿದೆ. ಈ ವಿಚಾರ ಸಂಕಿರಣದಲ್ಲಿ ಭಾಷಣ ಮಾಡಿದ ಶ್ರೀ ಸದಾನಂದ ಕನವಳ್ಳಿ, ಶ್ರೀ ಎನ್. ಕೆ. ಕುಲಕರ್ಣಿ, ಡಾ|| ಬಿಂದುಮಾಧವ ಪಾಠಕ್ ಮತ್ತು ಶ್ರೀ ಶ್ರೀಪಾದ ಹೆಗಡೆ ಅವರಿಗೆ ಅಕಾಡೆಮಿ ಧನ್ಯವಾದಗಳನ್ನು ತಿಳಿಸು ವುದಲ್ಲದೆ ಅವರ ಭಾಷಣಗಳನ್ನು ಈ ಪುಸ್ತಕದಲ್ಲಿ ಮುದ್ರಿಸಲು ಹಸ್ತ ಪ್ರತಿಗಳನ್ನು ಕಳುಹಿಸಿದ ಅವರೆಲ್ಲರಿಗೂ ಕೃತಜ್ಞತೆಗಳನ್ನರ್ಪಿಸುತ್ತಿದ್ದೇನೆ.

**ಪಂ. ಆರ್. ವಿ. ಶೇಷಾದ್ರಿ ಗವಾಯಿ**
ಅಧ್ಯಕ್ಷರು
ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ

ಬೆಂಗಳೂರು

# ವಿಷಯ ಸೂಚಿ

1. ಪಂಚಾಕ್ಷರಿ ಗವಾಯಿಗಳ ವ್ಯಕ್ತಿತ್ವ 1–12
—ಸದಾನಂದ ಕನವಳ್ಳಿ

2. ಉಭಯ ಗಾನವಿಶಾರದ ಶ್ರೀ ಪಂಚಾಕ್ಷರಿ ಗವಾಯಿ 13–24
—ಎನ್ಕೆ

3. ಗುರುಗಳಾಗಿ ಪಂಚಾಕ್ಷರಿ ಗವಾಯಿಗಳು 25–28
—ಬಿಂದುಮಾಧವ ಪಾಠಕ್

4. ಸಮಾಜ ಮತ್ತು ಪಂಚಾಕ್ಷರಿ ಗವಾಯಿಗಳು 29–32
— ಶ್ರೀಪಾದ ವಿ. ಹೆಗಡೆ

5. ಗಾನಯೋಗಿ ಪಂಚಾಕ್ಷರಿ ಗವಾಯಿ ಅವರು 33–34
—ಪಂ. ಆರ್. ವಿ. ಶೇಷಾದ್ರಿ ಗವಾಯಿ

# ಪಂಚಾಕ್ಷರಿ ಗವಾಯಿಗಳ ವ್ಯಕ್ತಿತ್ವ

ಸದಾನಂದ ಕನವಳ್ಳಿ

ಪಂಚಾಕ್ಷರಿ ಗವಾಯಿಗಳ ವ್ಯಕ್ತಿತ್ವ ಪುಟಕ್ಕಿಟ್ಟ ಚಿನ್ನದಂತೆ ಪರಿಶುದ್ಧವಾಗಿತ್ತು. ಯಾವ ದೃಷ್ಟಿಯಿಂದ ನೋಡಿದರೂ, ಭೂತಗನ್ನಡಿ ಹಿಡಿದು ನೋಡಿದರೂ ಅವರ ವ್ಯಕ್ತಿತ್ವದಲ್ಲಿ ಸಣ್ಣತನವಿರಲಿಲ್ಲ. ಅವರದು ತುಂಬು ವ್ಯಕ್ತಿತ್ವ, ಹಿರಿದಾದ ಚೇತನ.

ಪಂಚಾಕ್ಷರಿ ಗವಾಯಿಗಳು ಸಂಗೀತ ಸೇವೆಯಲ್ಲಿಯೇ ಜೀವ ಸವೆಸಿದವರು. ಉತ್ತರ ಕರ್ನಾಟಕದಲ್ಲಿ ಸಂಗೀತ ಪ್ರಸಾರಕ್ಕೆ ಬೃಹತ್‌ಚಾಲನೆ ನೀಡಿದವರು. ಸುತ್ತಿ ಸುಳಿದು ನೋಡದಂತೆ ಅಂಧಕರಾಗಿ ಹುಟ್ಟಿದರೂ (ಫೆಬ್ರುವರಿ ೨, ೧೮೯೨) ಕಾಯುವ ದಂಡಿಗೆಯ ಮಾಡಿ ಉರದಲೊತ್ತಿ, ಬಾರಿಸಿದವರು. ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದವರು. ಅನೇಕ ಶ್ರೇಷ್ಠ ಸಂಗೀತಗಾರರನ್ನು ತಯಾರಿಸಿದವರು. ಪ್ರಾತಃಸ್ಮರಣೀಯ ಪುಣ್ಯಚರಿತರು.

## ಬತ್ತೀಸ ರಾಗವ ಹಾಡಯ್ಯಾ

ಹಾನಗಲ್ಲ ಕುಮಾರಸ್ವಾಮಿಗಳ ಕರುಣೆಯ ಕಂದನಾಗಿ ಬೆಳೆಯುತ್ತ, ಕರ್ನಾಟಕಿ ಸಂಗೀತದಲ್ಲಿ ಪರಿಣತನಾಗಿ ಗದಿಗೆಯ್ಯ ಪಂಚಾಕ್ಷರಿ ಗವಾಯಿಗಳಾದರು. ಹಿಂದುಸ್ತಾನಿ ಸಂಗೀತ ಕಲಿಯಬೇಕೆಂಬ ಆಸೆ ಅಂಕುರಿಸಿತು. ಪಂಚಾಕ್ಷರಿ ಗವಾಯಿಗಳ ಮನಸ್ಸಿನಲ್ಲಿ ಇಚ್ಛೆ ಮೂಡುವುದೇ ತಡ, ಅದನ್ನು ಕುಮಾರಸ್ವಾಮಿಗಳು ತಕ್ಷಣ ಈಡೇರಿಸಿಬಿಡುತ್ತಿದ್ದರು. ಸುಪ್ರಸಿದ್ಧ ಗಾಯಕ ಅಧ್ವರ್ಯು ಅಬ್ದುಲ್ ವಹೀದ ಖಾನರನ್ನು ಕುಮಾರಸ್ವಾಮಿಗಳು ಶಿವಯೋಗಮಂದಿರಕ್ಕೆ ಕರೆಯಿಸಿ ಅಂದಿನ ಸೋವಿ ಕಾಲದಲ್ಲಿ (೧೯೧೭-೧೯೨೧) ತಿಂಗಳಿಗೆ ನೂರೈವತ್ತು ರೂಪಾಯಿ ಸಂಭಾವನೆ ನೀಡಿ ಪಂಚಾಕ್ಷರಿ ಗವಾಯಿಗಳ ಹಿಂದುಸ್ತಾನಿ ಸಂಗೀತ ಶಿಕ್ಷಣಕ್ಕೆ ಏರ್ಪಾಡು ಮಾಡಿದರು. ಬಳಿಕ ಪಂಚಾಕ್ಷರಿ ಗವಾಯಿಗಳು ಗ್ವಾಲಿಯರ್ ಘರಾಣೆಯ ನೀಲಕಂಠಬುವಾ ಮಿರಜಕರ ಅವರಲ್ಲಿ ವಿದ್ಯಾಭ್ಯಾಸಗೈದರು. ಸಂಗೀತ ಸಮುದ್ರವಿದ್ದಂತೆ. ಬೆಳಗಾವಿಯಲ್ಲಿ ನಾಗನೂರ ಸ್ವಾಮಿಗಳ ಮಠದಲ್ಲಿ ನಾಲ್ಕಾರು ತಿಂಗಳು ವಾಸ ಮಾಡಿದಾಗ ರಾಮಕೃಷ್ಣ ಬುವಾ ವಝೆ ಅವರಲ್ಲಿ ತಿಂಗಳಿಗೆ ೨೦೦ ರೂ. ಗೊತ್ತುಮಾಡಿ ಅಭ್ಯಾಸಗೈದರು.

೧೯೩೩ರಲ್ಲಿ ಎಚ್.ಎಂ.ವಿ. ಧ್ವನಿಮುದ್ರಣಕ್ಕಾಗಿ ಮುಂಬಯಿಗೆ ಹೋದಾಗ ಆರು ತಿಂಗಳು ಅಲ್ಲಿದ್ದರು. ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಮುಂಬಯಿಯಲ್ಲಿದ್ದ ಶ್ರೇಷ್ಠ ಗವಾಯಿಗಳ ಗಾಯನ ಕೇಳಿದರು. ಅವರು ಅನುಕೂಲ ಮಾಡಿಕೊಂಡು ವಿನಾಯಕರಾವ ಪಟವರ್ಧನ, ಮಾಸ್ತರ್ ದೀನಾನಾಥ, ನಾರಾಯಣ ರಾವ, ವ್ಯಾಸ, ಓಂಕಾರನಾಥ ಠಾಕೂರ, ಮಾಸ್ಟರ್ ವಸಂತ, ಮಂಜೀಖಾನ, ಬುರ್ಜಿ ಖಾನ, ಮೋಘುಬಾಯಿ ಕುರ್ಡಿಕರ, ಕೇಸರಬಾಯಿ ಕೇರಕರ ಮೊದಲಾದವರ ಗಾನ ಸುಧೆ ಸವಿದರು. ಪಂಚಾಕ್ಷರಿ ಗವಾಯಿಗಳಿಗೆ ಅಬ್ದುಲ್ ಕರೀಮಖಾನ ಹಾಗೂ ಸವಾಯಿ ಗಂಧರ್ವರ ನಿಕಟ ಪರಿಚಯವಿತ್ತು. ೧೯೩೭–೩೮ರಲ್ಲಿ ಇನಾಯತ್ ಹುಸೇನಖಾನರು ಗದಗಿನಲ್ಲಿ ವಾಸ್ತವ್ಯ ಹೂಡಿದಾಗ ಅವರಿಂದಲೂ ಕೆಲವು ತಿಂಗಳು ಹೇಳಿಸಿಕೊಂಡರು. ಉತ್ತಮವಾದುದು ಎಲ್ಲಿಯೆ ಇರಲಿ, ಅದನ್ನು ಗ್ರಹಿಸುವ, ಸಂಗ್ರಹಿಸುವ ಇಚ್ಛೆ ಪಂಚಾಕ್ಷರಿ ಗವಾಯಿಗಳದು.

ಹಲವು ಗುರುಗಳಿಂದ ಕಲಿತ, ಅನೇಕರ ಗಾಯನ ಆಲಿಸಿದ ಫಲವಾಗಿ ಪಂಚಾಕ್ಷರಿ ಗವಾಯಿಗಳ ಗಾಯನದಲ್ಲಿ ಹಲವು ಘರಾಣೆಯ ಶೈಲಿಗಳ, ಹಲವು ಗಾಯನ ಪ್ರಕಾರ ಗಳ ಮಾಧುರ್ಯ, ವೈವಿಧ್ಯ ಮುಪ್ಪುರಿಗೊಂಡಿದ್ದವು. ಖ್ಯಾಲ, ಠುಮರಿ. ಘಝಲ್, ಟಪ್ಪಾ, ಧ್ರುಪದಗಳನ್ನು ಅವರು ಲೀಲಾಜಾಲವಾಗಿ ಹಾಡಬಲ್ಲವರಾಗಿದ್ದರು.

## ಲಿಂಗವ್ಯಸನಿ, ಜಂಗಮಪ್ರೇಮಿ

ಪಂಚಾಕ್ಷರಿ ಗವಾಯಿಗಳಿಗೆ ಇಪ್ಪತ್ತೈದರ ತುಂಬು ಹರೆಯ. ನರನಾಡಿಗಳಲ್ಲಿ ಮಿಂಚಿನ ಸಂಚಾರ. ಎಲ್ಲ ಯುವಕರಿಗಿರುವಂತೆ ಮದುವೆಯಾಗುವ ಅದಮ್ಯ ಬಯಕೆ. ಆದರೆ, ಹಾಗೆಂದು ಕುಮಾರಸ್ವಾಮಿಗಳಲ್ಲಿ ಅರಿಕೆಮಾಡಿಕೊಳ್ಳುವುದೆಂತು ಎಂಬ ಆತಂಕ. ಒಂದು ದಿನ ಕುಮಾರಸ್ವಾಮಿಗಳು ಪಂಚಾಕ್ಷರಿ ಗವಾಯಿಗಳನ್ನು ಉದ್ದೇಶಿಸಿ ಇಂತು ಉಪದೇಶಿಸಿದರು :

"ನೀನು ಅವಿಚ್ಛಿನ್ನವಾಗಿ ಸಮಾಜಸೇವೆ ಮಾಡು. ಅದಕ್ಕಾಗಿ ಬ್ರಹ್ಮಚರ್ಯ ಪಾಲಿಸುವುದು ಅಗತ್ಯ."

"ಗುರುವೆ, ನಿಮ್ಮೆಲ್ಲ ಆಜ್ಞೆಗಳನ್ನು ಪಾಲಿಸುವೆ. ಆದರೆ ನನ್ನಿಂದ ಬ್ರಹ್ಮ ಚರ್ಯ ವ್ರತ ಸಾಧ್ಯವಿಲ್ಲ. ತಾವು ನನ್ನ ವಿವಾಹವೇರ್ಪಡಿಸಿ ನನ್ನನ್ನು ಉದ್ಧರಿಸ ಬೇಕು."

ಕುಮಾರಸ್ವಾಮಿಗಳಿಗೆ ಸಂದಿಗ್ಧ. ಅತ್ತ ತೆರ ವಿರೋಧಿಸುವ ತತ್ವ. ಇತ್ತ ಶಿಷ್ಯವಾತ್ಸಲ್ಯ. ಕನ್ಯಾಶುಲ್ಕವೀಯುವಂತಿಲ್ಲ. ಅದಿಲ್ಲದೆ ಕನ್ಯೆ ಸಿಗುವಂತಿಲ್ಲ. ಇದಕ್ಕೇನುಪಾಯ. ಶ್ರೀಗಳವರು ಕನ್ಯಾಶುಲ್ಕದ ಬದಲು ಕನಕಾಭರಣಗಳನ್ನು ನೀಡುವುದಾಗಿ ಘೋಷಿಸಿದರು. ಫಲಿಸಲಿಲ್ಲ. ಕುಮಾರಸ್ವಾಮಿಗಳು ಚಿಂತೆಯಿಂದ

ಕೊರಗಹತ್ತಿದರು. ಇದನ್ನೆಲ್ಲ ಕಂಡು ನೊಂದವರಲ್ಲೊಬ್ಬರಾದ ಆಲೂರ ಗುರಪ್ಪ ಪಂಚಾಕ್ಷರಿ ಗವಾಯಿಗಳಿಗೆ ಬುದ್ಧಿವಾದ ಹೇಳಿದರು :

"ಗವಾಯಿಗಳೆ, ನಿಮಗೇನು ತಲೆ ಕೆಟ್ಟಿದೆಯೆ ? ನಿಮ್ಮನ್ನು ತಂದೆತಾಯಿಗಿಂತ ಹೆಚ್ಚಾಗಿ ಸಾಕಿ ಸಲುಹಿ, ನೀರಿನಂತೆ ಹಣ ಸುರಿದು ನಿಮಗೆ ಸಂಗೀತವಿದ್ಯೆ ಕೊಡಿಸಿ ಉನ್ನತ ಮಟ್ಟಕ್ಕೇರಿಸಿದ ಗುರುಗಳ ಮನಸ್ಸನ್ನೇ ನೋಯಿಸುವುದೆ ? ಶ್ರೀಗಳವರಿಗೆ ಈ ಪರಿ ತೊಂದರೆ ಕೊಟ್ಟುದಕ್ಕೆ ಇಡೀ ವೀರಶೈವ ಸಮಾಜ ನಿಮ್ಮ ಮೇಲೆ ಸಿಟ್ಟಾಗಿದೆ. ನೀವೊಬ್ಬರು ಲಗ್ನವಾಗದಿದ್ದರೆ ಜಗತ್ತೇ ಹಾಳಾಗಿ ಹೋಗುವುದೆ ?"

ಪಂಚಾಕ್ಷರಿ ಗವಾಯಿಗಳ ಕಣ್ಣು ತೆರೆಯಿತು. ಕೂಡಲೆ ಕುಮಾರಸ್ವಾಮಿಗಳಿದ್ದೆಡೆ ಬಂದು ಕಾಲಿಗೆರಗಿದರು.

"ಗುರುವೆ, ನನ್ನಿಂದ ಘೋರ ತಪ್ಪಾಯಿತು. ನನಗೆ ಲಗ್ನ ಬೇಡ. ನಿಮ್ಮ ಆಣತಿಯಂತೆ ಬ್ರಹ್ಮಚರ್ಯ ಪಾಲಿಸಿ ಸಮಾಜಸೇವೆಗೈಯ್ಯುವೆ."

ಅಂದಿನಿಂದ ಅವರು ಚಿತ್ತಚಾಂಚಲ್ಯಕ್ಕೆ ಅವಕಾಶವೀಯಲಿಲ್ಲ. ಲಿಂಗವ್ಯಸನಿ, ಜಂಗಮಪ್ರೇಮಿಯಾದರು. ಲಿಂಗಾರ್ಚನೆ, ವಿದ್ಯಾರ್ಜನೆ, ವಿದ್ಯಾದಾನಗಳಲ್ಲಿ ತಲ್ಲೀನರಾದರು. ಕುಮಾರಸ್ವಾಮಿಗಳ ಸಂತೋಷಕ್ಕೆ ಪಾರವಿರಲಿಲ್ಲ. ಇನ್ನೂ ಸ್ವಲ್ಪ ಕಾಲ ಪರೀಕ್ಷಿಸಿ ನೋಡೋಣ ಎಂದು ಸುಮ್ಮನಿದ್ದರು.

ಒಮ್ಮೆ ಕುಮಾರಸ್ವಾಮಿಗಳೊಂದಿಗೆ ಪಂಚಾಕ್ಷರಿ ಗವಾಯಿಗಳು ಹುಬ್ಬಳ್ಳಿಗೆ ಬಂದಿದ್ದರು. ಪುರಾಣ, ಪ್ರವಚನ, ಕೀರ್ತನ, ಗಾಯನ ಕಾರ್ಯಕ್ರಮಗಳು ಎಡೆಬಿಡದೆ ಸಾಗಿದ್ದವು. ಒಂದು ದಿನ ಪಂಚಾಕ್ಷರಿ ಗವಾಯಿಗಳ ಗಾಯನ ಕೇಳಿ ಮರುಳಾದ ವಾರಾಂಗನೆಯೊಬ್ಬಳು ಅವರಲ್ಲಿ ಮೋಹಿತಳಾದಳು. ಅವರ ಬಿಡಾರಕ್ಕೆ ಬಂದು ಕಾಮಭಿಕ್ಷೆ ಬೇಡಿದಳು. ಪಂಚಾಕ್ಷರಿ ಗವಾಯಿಗಳು ವಿಷಯಕ್ಕೆಳಸದೆ "ಕಾಂತೆಯರೆನ್ನ ಮಾತೆಯರೆಂಬೆ" ಎಂದುಚ್ಚರಿಸಿ ಬ್ರಹ್ಮಚರ್ಯ ವ್ರತದಲ್ಲಿ ತಮ್ಮ ನೈಷ್ಠಿಕತೆಯನ್ನು ಸ್ಪಷ್ಟಪಡಿಸಿದರು.

ಎಲ್ಲೆಲ್ಲೂ ಅವರ ಜಿತೇಂದ್ರಿಯತ್ವದ ಗುಣಗಾನ. ಕುಮಾರಸ್ವಾಮಿಗಳಿಗಂತೂ ಹಿಡಿಸಲಾರದಷ್ಟು ಹಿಗ್ಗು. ಶಿವಯೋಗಮಂದಿರಕ್ಕೆ ಹಿಂತಿರುಗುತ್ತಲೆ ಬಿದರಿ ಪಟ್ಟದ ದೇವರಾದ ಶ್ರೀ ಪ್ರಭುಕುಮಾರ ಶಿವಾಚಾರ್ಯರನ್ನು ಕರೆಯಿಸಿ ಅವರಿಂದ ಅಮೃತ ಗಳಿಗೆಯಲ್ಲಿ ಶಿವದೀಕ್ಷೆ ಕೊಡಿಸಿದರು. ಅಂದಿನಿಂದ ಪಂಚಾಕ್ಷರಿ ಗವಾಯಿಗಳು ಗುರು, ಲಿಂಗ, ಜಂಗಮರಲ್ಲಿ ಶ್ರದ್ಧೆಯಿಟ್ಟು ವಿಧ್ಯುಕ್ತವಾಗಿ ತ್ರಿಕಾಲ ಪೂಜೆಯಲ್ಲಿ ನಿರತರಾಗಿ ಪಾದೋದಕ ಪ್ರಸಾದಗಳನ್ನು ಸ್ವೀಕರಿಸುತ್ತಿದ್ದರು. ತಮ್ಮ ನಿತ್ಯಾಚರಣೆಯಲ್ಲಿ ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ, ಷಟ್‌ಸ್ಥಲವೇ ಆತ್ಮ ಎಂಬ ಸಿದ್ಧಾಂತವನ್ನು ಅನೂಚಾನವಾಗಿ ಅನುಸರಿಸಿದರು. ಬೇನೆ ಬೇಸರಿಕೆಗಳೆನ್ನದೆ ಲಿಂಗ ಪೂಜಾ ವ್ರತ ಆಚರಿಸಿದರು. ಮುಂಬಯಿ ಆಕಾಶವಾಣಿ ಕೇಂದ್ರದಿಂದ ಕಾರ್ಯಕ್ರಮ ನೀಡಲು ಕರೆಬಂದರೂ ಅಲ್ಲಿ ಸ್ನಾನಪೂಜೆಗಳಿಗೆ ವ್ಯವಸ್ಥೆಯಾಗದೆಂದು ಕಾರ್ಯಕ್ರಮ

ಒಪ್ಪಿಕೊಳ್ಳಲಿಲ್ಲ. ಅಷ್ಟೇ ಏಕೆ, ಕೊನೆಯ ಗಳಿಗೆಯಲ್ಲಿ ಕೂಡ ಅಂಗೈಯಲ್ಲಿ ಲಿಂಗ ವನ್ನಿಟ್ಟುಕೊಂಡು ಪ್ರಾಣಬಿಟ್ಟರು.

## ಬಳ್ಳಿಗೆ ಕಾಯಿ ದಿನ್ನುತ್ತೆ ?

ಪಂಚಾಕ್ಷರಿ ಗವಾಯಿಗಳ ವಿದ್ಯಾರ್ಥಿವಾತ್ಸಲ್ಯ ಅನ್ಯಾಸದೃಶವಾಗಿತ್ತು. ಅವರ ವಿದ್ವತ್ತು ಮತ್ತು ವಾತ್ಸಲ್ಯಗಳಿಂದಾಗಿ ಬೆಲ್ಲಕ್ಕೆ ಇರುವೆ ಮುತ್ತುವಂತೆ ವಿದ್ಯಾರ್ಥಿಗಳು ಆಕರ್ಷಿತರಾದರು. ಜಾತಿ, ಮತ, ಪಂಥಭೇದವಿಲ್ಲದೆ ವಿದ್ಯಾದಾನ ಮಾಡಿದರು. ಬಂಕಾಪುರದ ಶಂಕರ ದೀಕ್ಷಿತರು ಸ್ಮಾರ್ತ ಬ್ರಾಹ್ಮಣರು. ಸಂಗೀತ ಕಲಿಯಲು ಪಂಚಾಕ್ಷರಿ ಗವಾಯಿಗಳಲ್ಲಿದ್ದಾಗ ಅವರ ವ್ರತನಿಯಮ ಪಾಲನೆಗೆ ಅನುಕೂಲವಾಗ ಲೆಂದು ಒಬ್ಬ ಬ್ರಾಹ್ಮಣ ವಿದ್ಯಾರ್ಥಿಯನ್ನು ಅವರ ಸೇವೆಗೆ ನಿಯಮಿಸಿದ್ದರು.

ಇಂದು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿರುವ ಆರ್.ವ್ಹಿ. ಶೇಷಾದ್ರಿ ಗವಾಯಿಯವರು ೧೯೪೦ ರಿಂದ ೧೯೫೦ರವರೆಗೆ ಪಂಚಾಕ್ಷರಿ ಗವಾಯಿಗಳು ಹಾಗೂ ಪುಟ್ಟರಾಜ ಗವಾಯಿಗಳಲ್ಲಿ ವಿದ್ಯಾಭ್ಯಾಸಗೈದಿರುವರು. ಅವರ ಸಂಧ್ಯಾ ವಂದನೆ ಮೊದಲಾದ ನಿತ್ಯಕರ್ಮಗಳಿಗೆ ವ್ಯತ್ಯಯವಾಗದಿರಲೆಂದು ಪಂಚಾಕ್ಷರಿ ಗವಾಯಿ ಗಳು ಅವರಿಗೆ ಒಬ್ಬ ಬ್ರಾಹ್ಮಣರ ಮನೆಯಲ್ಲಿ ವ್ಯವಸ್ಥೆ ಮಾಡಿದ್ದರು.

ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತ ಆದಾಯ-ಖರ್ಚು ಬಾಯಿಗೂಡುವುದು ದುಸ್ತರವಾಗುತ್ತ ನಡೆಯಿತು. ಸಂಗೀತ ಶಾಲೆಯ ವ್ಯವಸ್ಥಾಪಕರಾಗಿದ್ದ ಚಿತ್ತರಗಿ ಗಂಗಾಧರ ಶಾಸ್ತ್ರಿಗಳು ಪಂಚಾಕ್ಷರಿ ಗವಾಯಿಗಳಿಗೆ ಮಾತ್ರ ಹಾಲು ಕೊಡಹತ್ತಿದ್ದರು. ಇದು ಪಂಚಾಕ್ಷರಿ ಗವಾಯಿಗಳಿಗೆ ಗೊತ್ತಾಗಿ "ಮಕ್ಕಳನ್ನು ಬಿಟ್ಟು ನನಗೊಬ್ಬನಿಗೇ ಹಾಲು ಕುಡಿ ಎನ್ನುವಿಯಾ ? ಇದು ತಂದೆಯ ಧರ್ಮವೆ ? ಹಾಲು ತರಿಸಿ ಮಕ್ಕಳಿ ಗೆಲ್ಲ ಕೊಡು. ಕೊಡುವ ದೇವರು ಬಡವನಲ್ಲ" ಎಂದು ಹೇಳಿದರು. ಹಾಲು ಕುಡಿದು ಮಕ್ಕಳೂ ಪಂಚಾಕ್ಷರಿ ಗವಾಯಿಗಳೂ ಸುಖನಿದ್ರೆಗೈದರು. ಸಾಲ ತೀರಿಸುವು ದೆಂತು ಎಂಬ ಚಿಂತೆಯಲ್ಲಿ ಚಿತ್ತರಗಿ ಗಂಗಾಧರ ಶಾಸ್ತ್ರಿಗಳಿಗೆ ನಿದ್ದೆ ಹತ್ತಲಿಲ್ಲ. ಮರು ದಿನ ಬೆಳಿಗ್ಗೆ ಯಾರೊ ಹಿತೈಷಿಗಳು ೨೦೦ ರೂ. ಮನಿಆರ್ಡರ್ ಕಳಿಸಿದ್ದರು. ಪಂಚಾಕ್ಷರಿ ಗವಾಯಿಗಳು ಗಂಗಾಧರ ಶಾಸ್ತ್ರಿಗಳನ್ನು ಕರೆದು "ತೆಗೆದುಕೊ, ಹಾಲಿನ ಸಾಲ ತೀರಿಸು" ಎಂದು ಆ ದುಡ್ಡು ಕೊಟ್ಟರು.

೧೯೪೨. ಭೀಕರ ಬರಗಾಲ. ಪಂಚಾಕ್ಷರಿ ಗವಾಯಿಗಳ ಗಿಳಿವಿಂಡು ತಿರುಗಿ ತಿರುಗಿ ಸುಸ್ತಾಗಿ ಗದಗಿಗೆ ಬಂದಿಳಿಯಿತು. ಆಗ ಸಂಗೀತ-ನಾಟಕ ಶಾಲೆಯಲ್ಲಿ ೧೨೦-೧೫೦ ವಿದ್ಯಾರ್ಥಿಗಳಿದ್ದರು. ಗದಗಿನ ಪ್ರಮುಖರು ಮಕ್ಕಳನ್ನು ಕೆಲಕಾಲ ಅವರವರ ಊರಿಗೆ ಕಳಿಸಲು ಸೂಚಿಸಿದರು. ಪಂಚಾಕ್ಷರಿ ಗವಾಯಿಗಳು "ದುರ್ಭಿಕ್ಷದ ಸಮಯವೆಂದು ಮಕ್ಕಳನ್ನು ಮನೆಬಿಟ್ಟು ಕಳಿಸುವುದುಂಟೆ? ನಾನು ಉಪವಾಸವಿದ್ದಾ ದರೂ ನನ್ನ ತಂಬೂರಿಯ ತಂತಿಯನ್ನು ಮಾರಿಯಾದರೂ ಮಕ್ಕಳನ್ನು ಸಲಹುವೆ"

ಎಂದು ತಮ್ಮ ನಿರ್ಧಾರ ವ್ಯಕ್ತಮಾಡಿದರು. ಇದರಿಂದ ಪ್ರಭಾವಿತರಾದ ದಾನಶೂರ ಬಸರಿಗಿಡದ ವೀರಪ್ಪನವರು ಗವಾಯಿಗಳ ತಂಡದ ಊಟದ ವ ವಸ್ಥೆಯನ್ನು ತಾವೇ ನೋಡಿಕೊಳ್ಳುತ್ತೇವೆಂದು ಸಾರಿದರು. ತಮ್ಮ ಉದ್ಯೋಗದಲ್ಲಿ ಬಂದ ಲಾಭದಲ್ಲಿ ಒಂದು ಪಾಲನ್ನು ಪಂಚಾಕ್ಷರಿ ಗವಾಯಿಗಳಿಗೆ ನೀಡಿದರು. ಬಸರಿಗಿಡದ ವೀರಪ್ಪನವರು ದಾನಮಾಡಿದ ನಿವೇಶನದಲ್ಲಿ ವೀರೇಶ್ವರ ಪುಣ್ಯಾಶ್ರಮ ತಲೆಯೆತ್ತಿ ನಿಂತಿದೆ. ಪಂಚಾಕ್ಷರಿ ಗವಾಯಿಗಳು ಗದಗಿನಲ್ಲಿ ನೆಲೆನಿಂತರು.

ಬಸವರಾಜ ರಾಜಗುರು ಪಂಚಾಕ್ಷರಿ ಗವಾಯಿಗಳಲ್ಲಿ ೧೨ ವರ್ಷ ವಿದ್ಯಾಭ್ಯಾಸಗೈದು ಹೋಗುವಾಗ "ಗುರುಗಳೆ, ನಾನು ಬಡವ, ಗುರುದಕ್ಷಿಣೆ ನೀಡಲು ಹಣವಿಲ್ಲ. ಏನು ಮಾಡಲಿ ?" ಎಂದರು. ಪಂಚಾಕ್ಷರಿ ಗವಾಯಿಗಳು "ನೀನು ಚಿಂತಿಸಬೇಡ. ನನ್ನಂತೆ ನೀನೂ ದುಡ್ಡಿಗಾಸೆಪಡದೆ ಜಾತಿವಿಜಾತಿಯೆನ್ನದೆ ವಿದ್ಯಾದಾನ ಮಾಡು. ಅದೇ ನೀನು ನನಗೆ ನೀಡುವ ಗುರುದಕ್ಷಿಣೆ" ಎಂದರು. ಈ ಪ್ರಸಂಗವನ್ನು ಹೇಳುವಾಗ ಬಸವರಾಜ ರಾಜಗುರು ಅವರ ಕಣ್ಣು ಹನಿಗೂಡುತ್ತಿದ್ದವು. ಅಂತೆಯೆ, ಬಸವರಾಜ ರಾಜಗುರು ಅನೇಕ ಶಿಷ್ಯರಿಗೆ ವಿದ್ಯಾದಾನ ಮಾಡಿದರು.

## ಆದ್ಯರ ವಚನ ಪರುಷ ಕಂಡಣ್ಣಾ

ವಚನ ಪಿತಾಮಹ ಫ. ಗು. ಹಳಕಟ್ಟಿಯವರು ತಮ್ಮ ಪ್ರಥಮ ವಚನ ಸಂಗ್ರಹವನ್ನು ಕುಮಾರಸ್ವಾಮಿಗಳಿಗೆ ಅರ್ಪಿಸಿದ್ದರು. ಅದರ ಒಂದು ಪ್ರತಿಯನ್ನು ಪಂಚಾಕ್ಷರಿ ಗವಾಯಿಗಳಿಗೂ ಕಳಿಸಿದ್ದರು. ಕುಮಾರಸ್ವಾಮಿಗಳು ಬರಹೋಗುವ ಭಕ್ತಾದಿಗಳಿಗೆ ವಚನಗಳ ಮಹತಿಯನ್ನು ತಿಳಿಸಿಹೇಳುತ್ತಿದ್ದರು. ಅದೆಲ್ಲದರ ಪ್ರಭಾವ ಪಂಚಾಕ್ಷರಿ ಗವಾಯಿಗಳ ಮೇಲಾಯಿತು. ಅವರ ಮನ ಅವುಗಳ ಸಂಗೀತಮಯತೆಯತ್ತ ಹರಿಯಿತು. ಅವುಗಳನ್ನು ಶಾಸ್ತ್ರೀಯ ಸಂಗೀತಕ್ಕೆ ಅಳವಡಿಸಿ ಅಭಂಗ ಧಾಟಿಯಲ್ಲಿ ಹಾಡಲಾರಂಭಿಸಿದರು. ಹಾಗೆ ಮಾಡಿದವರಲ್ಲಿ ಅವರೇ ಪ್ರಥಮರು. ಅವರು ಸಿದ್ಧಪಡಿಸಿದ ಪ್ರಥಮ ವಚನವೆಂದರೆ, ನಾದಪ್ರಿಯ ಶಿವನೆಂಬರು,... ೧೯೩೨ ರಲ್ಲಿ ಬಸವ ಜಯಂತಿ ಉತ್ಸವಕ್ಕೆ ಸೊಲ್ಲಾಪುರದ ಶರಣಮ್ಮನವರಿಂದ ಆಮಂತ್ರಣ ಬಂದಿತು. ಪಂಚಾಕ್ಷರಿ ಗವಾಯಿಗಳು ವಾದ್ಯಮೇಳ ಸಿದ್ಧಪಡಿಸಿಕೊಂಡು ಹೋಗಿ ಸೊಲ್ಲಾಪುರದಲ್ಲಿ ಪ್ರಥಮ ಸಾರ್ವಜನಿಕ ವಚನ–ಗಾಯನ ಕಾರ್ಯಕ್ರಮ ನೀಡಿದರು. ಇಂದು ವಚನಗಳು ಎಷ್ಟು ಜನಪ್ರಿಯವಾಗಿವೆಯೆಂದರೆ ಅವುಗಳನ್ನು ಬಲ್ಲ ಸಂಗೀತಗಾರರು ತಮ್ಮ ಕಚೇರಿಯಲ್ಲಿ ಒಂದೋ ಎರಡೋ ವಚನ ಹಾಡುವುದು ಸರ್ವೇಸಾಮಾನ್ಯ. ಈ ಜನಪ್ರಿಯತೆಗೆ ಅಸ್ತಿವಾರ ಹಾಕಿದವರು ಪಂಚಾಕ್ಷರಿ ಗವಾಯಿಗಳು.

೧೯೩೩ ರಲ್ಲಿ ಪಂಚಾಕ್ಷರಿ ಗವಾಯಿಗಳಿಗೆ ಎಚ್. ಎಂ. ವ್ಹಿ. ಕಂಪನಿಯಿಂದ ಧ್ವನಿಮುದ್ರಣಕ್ಕೆ ಆಮಂತ್ರಣ ಬಂದಿತು. ಒಂಭತ್ತು ಜನರ ಪರಿವಾರ

ಪಯಣ ಬೆಳೆಸಿತು. ಪಂಚಾಕ್ಷರಿ ಗವಾಯಿಗಳು, ಪುಟ್ಟರಾಜ ಗವಾಯಿಗಳು, ಬಸವ ರಾಜ ರಾಜಗುರು, ಒಬ್ಬರು ಕಾರಕೂನರು, ಒಬ್ಬ ಅಡಿಗೆಯವ, ಒಬ್ಬ ನೀರು ನಿಗದಿ ಸೇವೆಯುವ, ಒಬ್ಬ ಕ್ರಿಯಾಮೂರ್ತಿ, ಇಬ್ಬರು ವಿದ್ಯಾರ್ಥಿಗಳು. ಮುಂಬಯಿಯ ಕಾಲ್ಬಾದೇವಿ ರಸ್ತೆಯಲ್ಲಿ ಹತ್ತರಕಿ ನಂದೆಪ್ಪ (ಸಂಕೇಶ್ವರ ಹತ್ತಿರ) ಅಡದ ಅಂಗಡಿ ಇಟ್ಟಿದ್ದರು. ಅಲ್ಲಿಯೇ ವಾಸಕ್ಕೆ ಅನುಕೂಲ ಮಾಡಿಕೊಟ್ಟರು. ಪರಿವಾರದ ಊಟಕ್ಕೆ ವಾರದ ಮನೆ ವ್ಯವಸ್ಥೆಯಾಯಿತು.

ಪಂಚಾಕ್ಷರಿ ಗವಾಯಿಗಳು, ಪುಟ್ಟರಾಜ ಗವಾಯಿಗಳು, ಬಸವರಾಜ ರಾಜಗುರು ಮೂವರೂ ಧ್ವನಿಮುದ್ರಣ ನೀಡಬೇಕಿತ್ತು. ಮೂವರೂ ಎರಡೆರಡು ಕನ್ನಡ ಚೀಜುಗಳನ್ನು ಹಾಡುವಂತೆ ಪಂಚಾಕ್ಷರಿ ಗವಾಯಿಗಳು ನಿರ್ಧರಿಸಿದ್ದರು. ಇದನ್ನು ಕೇಳಿ ಎಚ್. ಎಂ. ವ್ಹಿ. ಕಂಪನಿಯವರು ಗಾಬರಿಯಾಗಿ ಅದು ಸಾಧ್ಯವಿಲ್ಲ ಎಂದರು. ಹಾಗಾದರೆ, ಧ್ವನಿಮುದ್ರಣ ಬೇಡ ಎಂದು ಪಂಚಾಕ್ಷರಿ ಗವಾಯಿಗಳ ಪಟ್ಟು. ಕೊನೆಗೆ ಎಚ್. ಎಂ. ವ್ಹಿ. ಯವರೆ ಮಣಿದು ಒಪ್ಪಿದರು.

ಪಂಚಾಕ್ಷರಿ ಗವಾಯಿಗಳು ಖಮಾಜ (ಹಿಂದೂಸ್ಥಾನಿ) ರಾಗದಲ್ಲಿ "ನೋಡಲಾಗದೆ ದೇವ" ಮತ್ತು ಪಟದೀಪ ರಾಗದಲ್ಲಿ "ಮಾಡಲಿಲ್ಲವೆ ತಪವ" ಹಾಡಿದರು. ಎರಡೂ ನಿಜಗುಣ ಶಿವಯೋಗಿಗಳ ಕೃತಿಗಳು. ಅಲ್ಲದೆ, ದರಬಾರ್ (ಕರ್ನಾಟಕಿ) ರಾಗದಲ್ಲಿ ತ್ಯಾಗರಾಜರ ಲೋಚನ ಕಮಲಲೋಚನ" ಕೃತಿಯನ್ನೂ ಬೇಗಡೆ (ಕರ್ನಾಟಕಿ) ರಾಗದಲ್ಲಿ "ತ್ಯಾಗರಾಜಾಯ ನಮಸ್ತೆ" ಕೃತಿಯನ್ನೂ ಹಾಡಿದರು.

ಪುಟ್ಟರಾಜ ಗವಾಯಿಗಳು ನಾಲ್ಕು ಹಿಂದುಸ್ಥಾನಿ ರಾಗಗಳನ್ನು ಹಾಡಿದರು. ದೇಸಕಾರ ರಾಗದಲ್ಲಿ ಘನಮಠಾರ್ಯರ "ಧ್ಯಾನವ ಮಾಡೊ ನಿಜಗುರು," ಜೀವನಪುರಿ ರಾಗದಲ್ಲಿ ಬಾಲಲೀಲಾ ಮಹಾಂತ ಶಿವಯೋಗಿಗಳ "ಮಗನ ತೂಗಿರೊ," ಬಾಗೇಶ್ರೀ ರಾಗದಲ್ಲಿ "ಚೈನ ನಹಿ ಮೈತೋ ಆಯೊ ಪಿಯಾ ಬಿನ" ಹಾಗೂ ಕೇದಾರ ರಾಗದಲ್ಲಿ "ಕಂಗನದಾ ಮೋರಾ".

ಬಸವರಾಜ ರಾಜಗುರು ಕುಮಾರಸ್ವಾಮಿಗಳ ಎರಡು ಸ್ತೋತ್ರಗಳನ್ನು ಹಿಂದುಸ್ಥಾನಿ ಪದ್ಧತಿಯಲ್ಲಿ ಹಾಡಿದರು. ದೇಸಕಾರ ರಾಗದಲ್ಲಿ "ಹಾನಗಲ್ಲ ಶ್ರೀ ಕುಮಾರದೇವ", ಖಮಾಜ ರಾಗದಲ್ಲಿ "ಶ್ರೀ ಕುಮಾರದೇವ".

ಈಗ ಕೂಡ ಗಾಯಕರು ಕನ್ನಡ ಚೀಜುಗಳನ್ನು (ವಚನಗಳನ್ನುಳಿದು) ಹಾಡಲು ಹಿಂದೇಟು ಹಾಕುತ್ತಾರೆ. ಹಿಂದುಸ್ಥಾನಿಯವರಾದರೆ ಹಿಂದಿ, ಮರಾಠಿ ಚೀಜುಗಳನ್ನು ಹಾಡಿಯಾರು. ಕರ್ನಾಟಕಿಯವರಾದರೆ ತೆಲುಗು, ತಮಿಳು ಕೃತಿಗಳನ್ನು ಹಾಡಿ ಯಾರು. ಈ ಹಿನ್ನೆಲೆಯಲ್ಲಿ ಅರವತ್ತು ವರ್ಷಗಳ ಹಿಂದೆಯೇ ಪಂಚಾಕ್ಷರಿ ಗವಾಯಿ ಗಳು ಕನ್ನಡ ಡಿಂಡಿಮವನ್ನು ಬಾರಿಸಿದುದು ಅಚ್ಚರಿ ಉಂಟುಮಾಡುತ್ತದೆ.

## ವಿದ್ವಾನ್ ಸರ್ವತ್ರ ಪೂಜ್ಯತೆ

ಪಂಚಾಕ್ಷರಿ ಗವಾಯಿಗಳು ಕೀರ್ತಿಗೆ ಹಾತೊರೆದವರಲ್ಲ. ಪ್ರಶಸ್ತಿಗಳು ಅವರನ್ನು ಅರಸಿಬಂದವು. ಅವರಿಗೇನು ಹಾಡಲು ಬರುತ್ತದೆ ಎನ್ನುವ ಅಸಡ್ಡೆಯ ಮಾತುಗಳು ಹಾನಗಲ್ಲ ಕುಮಾರಸ್ವಾಮಿಗಳ ಕಿವಿಗೆ ಬಿದ್ದವು. ಅದಕ್ಕವರು ರಾಯಚೂರು ಬಳಿಯ ರಾಮಗಡ್ಡಿಯಲ್ಲಿ (ಸು. ೧೯೧೫) ಒಂದು ವಿದ್ವತ್ಸಭೆ ಏರ್ಪಡಿಸಿ ಟೀಕೆ ಮಾಡುತ್ತಿದ್ದ ವಿದ್ವಾಂಸರನ್ನೆಲ್ಲ ಆಮಂತ್ರಿಸಿದರು. ಪಂಚಾಕ್ಷರಿ ಗವಾಯಿಗಳ ಗಾಯನ ಕೇಳಿದ ಮೇಲೆ ಶ್ರೋತೃಗಳಿಗೆ ಇತರರ ಗಾಯನ ಹಿಡಿಸಲಿಲ್ಲ. ಶ್ರೀಗಳವರು ವಿದ್ವಾಂಸರನ್ನು ಉದ್ದೇಶಿಸಿ "ನಮ್ಮ ಗವಾಯಿಗಳನ್ನು ಶಾಸ್ತ್ರಜ್ಞಾನದಲ್ಲಿ ಪರೀಕ್ಷಿಸಬೇಕಿದ್ದರೆ ಪರೀಕ್ಷಿಸ ಬಹುದು ಎಂದರು. ಅಲ್ಲಿ ನೆರೆದಿದ್ದ ಪಂಡಿತರು ಮೂರು ದಿನ ಪ್ರಶ್ನೆಗಳ ಸುರಿ ಮಳೆಗೈದರು. ಅವೆಲ್ಲವುಗಳಿಗೂ ಪಂಚಾಕ್ಷರಿ ಗವಾಯಿಗಳು ಸಮರ್ಪಕ ಉತ್ತರ ನೀಡಿದರು". ವಿದ್ವಾಂಸರೆಲ್ಲರೂ ಕೂಡಿ ಪಂಚಾಕ್ಷರಿ ಗವಾಯಿಗಳಿಗೆ "ಪಂಡಿತ" ಎಂಬ ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಪಂಚಾಕ್ಷರಿ ಗವಾಯಿಗಳಿಗೆ ಉಭಯ ಗಾಯನ ವಿಶಾರದ, ಸಂಗೀತ ರತ್ನ, ಸಂಗೀತ ಸಾಮ್ರಾಟ, ಲಲಿತಕಲಾ ಪಿತಾಮಹ, ಗಾನಯೋಗಿ, ಭೂಗಂಧರ್ವ ಚಂದ್ರ, ಗಾನ ಕಲಾನಿಧಿ, ಸಂಗೀತಸಾಗರ, ಸಂಗೀತ ಸುಧಾನಿಧಿ, ಗಾಯನಾಚಾರ್ಯ, ಉಭಯ ಗಾಯನಾಚಾರ್ಯ ಮೊದಲಾದ ಬಿರುದುಗಳು ಬಂದವು.

ಸ್ವದೇಶೇ ಪೂಜ್ಯತೇ ರಾಜಾ, ವಿದ್ವಾನ್ ಸರ್ವತ್ರ ಪೂಜ್ಯತೇ. ಪಂಚಾಕ್ಷರಿ ಗವಾಯಿಗಳ ವಿದ್ವತ್ತಿನ ಖ್ಯಾತಿ ಎಲ್ಲೆಡೆ ಪಸರಿಸಿತು. ನಾಡಿನಾದ್ಯಂತ ಅವರ ಸಂಗೀತ ಕಚೇರಿಗಳು ಏರ್ಪಟ್ಟವು. ಗಜೇಂದ್ರಗಡದರಾ ಜರಾದ ಭುಜಂಗರಾವ್ ಘೋರ್ಪಡೆ ಅವರ ಮನೆಯಲ್ಲಿ ಜರುಗಿದ ವಿವಾಹ ಸಮಾರಂಭದ ನಿಮಿತ್ತ ಸಂಗೀತ ಕಚೇರಿ ಏರ್ಪಡಿಸಿದ್ದರು. ಗಂಡಿನವರ ಪರವಾಗಿ ಪಂಚಾಕ್ಷರಿ ಗವಾಯಿಗಳನ್ನು, ಹೆಣ್ಣಿನವರ ಪರವಾಗಿ ಅಬ್ದುಲ್ ಕರೀಮಖಾನರನ್ನು ಆಮಂತ್ರಿಸಲಾಗಿತ್ತು. ಅಬ್ದುಲ್ ಕರೀಮ ಖಾನರು ಕರ್ನಾಟಕಿ ಸಂಗೀತವನ್ನೇನು ಕೇಳುವುದು ಎಂದು ತಮ್ಮ ಕೋಣೆಯಲ್ಲಿಯೇ ಕುಳಿತರು. ಪಂಚಾಕ್ಷರಿ ಗವಾಯಿಗಳ ಗಾಯನದಿಂದ ಆಕರ್ಷಿತರಾಗಿ ಬಂದು, ಕೇಳಿ ಆನಂದಿಸಿದರು.

೧೯೨೦, ಗೋಕಾಕದಲ್ಲಿರುವ ಕೊಣ್ಣೂರ ಮರಡಿ ಮಠದಲ್ಲಿ ಜಾತ್ರೆ. ಪಂಚಾಕ್ಷರಿ ಗವಾಯಿಗಳ ಗಾಯನ. ಮೈಸೂರಿನಿಂದ ವಿದ್ವಾನ್ ರಾಚಪ್ಪನವರನ್ನೂ ಆಮಂತ್ರಿಸಿದ್ದರು. ಅವರು "ನಮ್ಮ ಮೈಸೂರು ಆಸ್ಥಾನದಲ್ಲಿ ಕೂಡ ಪಂಚಾಕ್ಷರಿ ಗವಾಯಿಗಳಂತಹ ಗವಾಯಿಗಳಂತಹವರು ವಿರಳ" ಎಂದು ಉದ್ಗರಿಸಿದರು.

ಒಮ್ಮೆ ಹುಬ್ಬಳ್ಳಿಯ ಗಣೇಶ ಥಿಯೇಟರಿನಲ್ಲಿ ಬಾಲಗಂಧರ್ವ ನಾಟಕ ಕಂಪನಿ ಬಿಡಾರ ಹೂಡಿತ್ತು. ಪಂಚಾಕ್ಷರಿ ಗವಾಯಿಗಳ ವಾಸ್ತವ್ಯವೂ ಹುಬ್ಬಳ್ಳಿಯಲ್ಲಿತ್ತು. ಸರಿ, ಒಂದು ರಾತ್ರಿ ನಾಟಕ ನೋಡಲು ಹೋದರು. ನೋಡುವುದೇನು ಬಂತು ?

ಕೇಳುವುದು ತಾನೆ ? ಸಂಗೀತನಾಟಕವೆಂದ ಮೇಲೆ ಕುಳಿತರೆ ಹಾಡು, ನಿಂತರೆ ಹಾಡು. ಬಾಲಗಂಧರ್ವರ ಮಧುರ ಗಾಯನಕ್ಕೆ ಪಂಚಾಕ್ಷರಿ ಗವಾಯಿಗಳು ಮಾರು ಹೋದರು. ಪ್ರತಿ ರಾತ್ರಿಯೂ ಮೊದಲ ಸಾಲಿನ ನಡುವಿನ ಆಸನದಲ್ಲಿ ಹಾಜರ್. ವಾಹವಾ, ವಾಹವಾ ಎಂದು ಮೆಚ್ಚಿಗೆ ಸೂಸಬೇಕು. ಬಾಲಗಂಧರ್ವರು "ತೇ ಕೋಣ್" (ಯಾರವರು) ಎಂದು ಕೇಳಿ ತಿಳಿದುಕೊಂಡರು. ಕ್ಯಾಂಪು ಕಿತ್ತುವ ಕೊನೆಯ ರಾತ್ರಿ ಪಂಚಾಕ್ಷರಿಗವಾಯಿಗಳನ್ನು ರಂಗಮಂಚದ ಮೇಲೆ ಬರಮಾಡಿಕೊಂಡು ಜರತಾರಿ ರೇಷ್ಮೆ ಮಡಿ ಆಹೇರ ಮಾಡಿ ಗೌರವಿಸಿದರು. ಪಂಚಾಕ್ಷರಿ ಗವಾಯಿಗಳಿಂದ ಕರ್ನಾಟಕಿ ಕೀರ್ತನೆ ಗಳನ್ನು ಹೇಳಿಸಿಕೊಂಡರು. ಅಲ್ಲದೆ, "ಮರುಗೇಲರಾ ಓ ರಾಘವಾ" ಕೃತಿಯನ್ನು ಮರಾಠಿಗೆ ಅನುವಾದಿಸಿಕೊಂಡರು.

೧೨-೪-೧೯೩೯ ರಂದು ವರಕವಿ ದ. ರಾ. ಬೇಂದ್ರೆ ಪತ್ರ ಬರೆದು ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸಿದರು : "ಪೂಜ್ಯ ಮತ್ತು ಸರ್ವಮಾನ್ಯರಾದ ಗವಾಯಿ ಗಳ ಹಾಗೂ ಶಿಷ್ಯವರ್ಗದ ಸಂಗೀತ ಸಾಹಿತ್ಯ ಕಚೇರಿಗಳನ್ನು ಅನೇಕ ಕಡೆ ಸಂದರ್ಶಿಸಿ ದ್ದೇನೆ. ಈ ಶ್ಲಾಘನೀಯವಾದ ಲೋಕೋಪಕಾರ ಕಕಾರ್ಯಕ್ಕೆ ಜಗದ್ರಕ್ಷನು ಸದಾಕಾಲದಲ್ಲಿಯೂ ಹೆಚ್ಚು ಹೆಚ್ಚು ಪ್ರೋತ್ಸಾಹವನ್ನೀಯಲಿ."

೧೯೩೯. ಸಂಗೀತ ಶಾಲೆಯ ರಜತೋತ್ಸವ. ವಚನಪಿತಾಮಹ ಫ. ಗು. ಹಳಕಟ್ಟಿ ಆ ಸಂದರ್ಭದಲ್ಲಿ ಅಭಿನಂದಿಸಿದ್ದು ಹೀಗೆ: "ಈ ಶಾಲೆಯನ್ನು ಗಾಯನವಿಶಾರದ ಪಂಚಾಕ್ಷರಿ ಗವಾಯಿಗಳು ಅವ್ಯಾಹತವಾಗಿ ಈವರೆಗೂ ನಡೆಸುತ್ತ ಬಂದಿದ್ದಾರೆ. ಉತ್ತರ ಕರ್ನಾಟಕದಲ್ಲಿ ಈ ಬಗೆಯ ಕಾರ್ಯ ಮಾಡುವ ಸಂಸ್ಥೆಯೆಂದರೆ ಇದೊಂದೆಯಾಗಿರು ತ್ತದೆ. ಕೇವಲ ಸಾರ್ವಜನಿಕ ಹಿತದೃಷ್ಟಿಯನ್ನು ಇಟ್ಟುಕೊಂಡು ಈ ಶಾಲೆಯನ್ನು ನಡೆಸುತ್ತಿರುವುದು ಅಭಿನಂದನೀಯವಾಗಿದೆ."

೫-೪-೧೯೩೯ ರಂದು ಕೊಪ್ಪಳ ಮುಕ್ಕಾಮಿನಿಂದ ಗರೂಡ ಸದಾಶಿವರಾಯರು ಪಂಚಾಕ್ಷರಿ ಗವಾಯಿಗಳಿಗೆ ಅಭಿನಂದನ ಪತ್ರ ಬರೆದಿದ್ದರು : "ತಮ್ಮ ಉತ್ಕಟವಾದ ಕಲಾಪ್ರೇಮಕ್ಕೆ ಮಹಾ ತಪಸ್ವಿಗಳಾದ ಹಾನಗಲ್ಲ ಕುಮಾರಸ್ವಾಮಿಗಳ ಆಶೀರ್ವಾದ ಬಲವಿರುವುದರಿಂದ ಭೌತಿಕ ನಯನವಿಹೀನರಾದ ತಾವು ದಿವ್ಯವಾದ ಜ್ಞಾನಚಕ್ಷು ಗಳನ್ನು ಪಡೆದವರಾಗಿ ಅಖಂಡವಾಗಿ ಜನತಾ ಜನಾರ್ದನನ ಸೇವೆ ಮಾಡುತ್ತ ಧನ್ಯ ರೆಂದೆನಿಸಿರುವಿರಿ. ಇದೇ ಸದ್ಗತಿಯ ತಳಹದಿ. ತಮ್ಮ ಸಂಗೀತ ವಿದ್ಯಾಲಯದಲ್ಲಿ ಗವಾಯಿಗಳೂ, ಪುರಾಣಿಕರೂ, ಕೀರ್ತನಕಾರರೂ ತಯಾರ ಆಗುವಂತೆ ನಾಟ್ಯಕಲೆ ಸೇವೆಯನ್ನು ಮಾಡುವ ಸಂಗೀತಜ್ಞ, ಸುಶೀಲ, ಸುದೃಢ, ಸುಸ್ವರೂಪಿಗಳಾದ ಅಭಿನಯಕಲಾಪಟುಗಳಾದ ನಟರು ತಯಾರಾಗಿ ಲೋಕಸೇವೆಯನ್ನು ಮಾಡಲುದ್ಯುಕ್ತ ರಾದರೆ ನಾಟ್ಯಸಂಸ್ಥೆಗಳ ನೈರ್ಮಲ್ಯ ಹೆಚ್ಚಿ ಅವು ಲೋಕಾದರಕ್ಕೆ ಪಾತ್ರವಾಗಿ ಲೋಕ ಶಿಕ್ಷಣವು ಕ್ರಮಬದ್ಧವಾಗಬಹುದು."

## ವಜ್ರಾದಪಿ ಕಠೋರಾನಿ

ಹೂವಿಗಿಂತ ಮೃದುವಾಗಿದ್ದ ಪಂಚಾಕ್ಷರಿ ಗವಾಯಿಗಳ ಮನಸ್ಸು, ಕೊಟ್ಟ ಭಾಷೆ ತಪ್ಪಿದವರ ವಿಷಯದಲ್ಲಿ, ಎರಡು ಬಗೆದವರ ವಿಷಯದಲ್ಲಿ, ಅನ್ಯಾಯದಿಂದ ನಡೆದುಕೊಂಡವರ ವಿಷಯದಲ್ಲಿ ವಜ್ರಕ್ಕಿಂತ ಕಠೋರವಾದ ಪ್ರಸಂಗಗಳಿವೆ.

ಗದಗಿನ ವರ್ತಕರೊಬ್ಬರು ದೇಣಿಗೆ ನೀಡುವುದಾಗಿ ವಾಗ್ದಾನ ಮಾಡಿದ್ದರು. ಪಂಚಾಕ್ಷರಿ ಗವಾಯಿಗಳು ಅದನ್ನು ಪಡೆಯಲೋಸುಗ ಒಮ್ಮೆ ಅವರ ಮನೆಗೆ ಹೋದರು. ವರ್ತಕರು ಮನೆಯಲ್ಲಿರಲಿಲ್ಲ. ವರ್ತಕರ ಮಗ "ನನ್ನ ತಂದೆಗೆ ಬುದ್ಧಿಯಿಲ್ಲ. ನಮ್ಮ ವ್ಯಾಪಾರವೆ ಚನ್ನಾಗಿರದಾಗ ದೇಣಿಗೆ ನೀಡುವುದಾಗಿ ಅದು ಹೇಗೆ ಮಾತು ಕೊಟ್ಟ ?" ಎಂದು ಬಿರುನುಡಿದ. ಮಗನು ತಂದೆಯ ಔದಾರ್ಯ ವನ್ನು ಜರೆದು ಮಾತಾಡಿದುದು ಪಂಚಾಕ್ಷರಿ ಗವಾಯಿಗಳಿಗೆ ದುಃಖವನ್ನುಂಟು ಮಾಡಿತು. "ಇನ್ನು ಮುಂದೆ ನಾನು ಮಾತ್ರವಲ್ಲ ನನ್ನ ಬೆತ್ತ ಸಹ ನಿಮ್ಮ ಹೊಸ್ತಿಲ ತುಳಿಯುವುದಿಲ್ಲ" ಎಂದವರ ಅಲ್ಲಿ ಒಂದು ಕ್ಷಣವೂ ನಿಲ್ಲದೆ ಹೊರಟುಬಿಟ್ಟರು.

ಪಂಚಾಕ್ಷರಿ ಗವಾಯಿಗಳು ಲಿಂಗೈಕ್ಯರಾದ ಹಲವು ವರ್ಷಗಳ ಬಳಿಕ ಪುಟ್ಟರಾಜ ಗವಾಯಿಗಳು ಆ ಮನೆಗೆ ಬಿನ್ನಹಕ್ಕೆ ಬಂದಿದ್ದರು. ಪಂಚಾಕ್ಷರಿ ಗವಾಯಿಗಳು ಆಶೀರ್ವದಿಸಿ ನೀಡಿದ ಬೆತ್ತವನ್ನು ಪುಟ್ಟರಾಜ ಗವಾಯಿಗಳು ಎಲ್ಲಿಯೆ ಹೋಗಲಿ ಬಿಟ್ಟುಹೋದವರಲ್ಲ. ಅಂದು ಒಂದು ಆಶ್ಚರ್ಯ ಘಟಿಸಿತ್ತು. ವರ್ತಕರ ಮನೆ ತಲುಪಿದಾಗ ಬಂಡಿಯಲ್ಲಿ ಕೈಯಾಡಿಸುತ್ತಾರೆ, ಬೆತ್ತವೇ ಇಲ್ಲ. ಗುರುಗಳ ಬೆತ್ತವನ್ನು ಅಲಕ್ಷತನದಿಂದ ಕಳೆದುಕೊಂಡೆನಲ್ಲ ಎಂಬ ದುಗುಡ. ಬಿನ್ನಹ ತೀರಿಸಿಕೊಂಡು ವಾಪಸು ಹೋಗುವಾಗ ಹಾದಿಯಲ್ಲಿ ಬಿದ್ದಿದ್ದ ಬೆತ್ತ ಕಾಣಿಸಿತು. ಅದನ್ನು ನೋಡಿದ ಶಿಷ್ಯನೊಬ್ಬ ಪುಟ್ಟರಾಜ ಗವಾಯಿಗಳಿಗೆ ಅದನ್ನು ತಂದುಕೊಟ್ಟ. ಕಳೆದುಹೋದ ರತ್ನ ದೊರಕಿದಂತೆ ಖುಷಿಪಟ್ಟ ಪುಟ್ಟರಾಜ ಗವಾಯಿಗಳಿಗೆ "ನನ್ನ ಬೆತ್ತ ಸಹ ನಿಮ್ಮ ಹೊಸ್ತಿಲ ದಾಟುವುದಿಲ್ಲ" ಎಂಬ ಪಂಚಾಕ್ಷರಿ ಗವಾಯಿಗಳ ಪ್ರತಿಜ್ಞೆ ಜ್ಞಾಪಕಕ್ಕೆ ಬಂತು.

ಶಿರಹಟ್ಟಿಯಲ್ಲೊಮ್ಮೆ ಪಂಚಾಕ್ಷರಿ ಗವಾಯಿಗಳ ನಾಟಕ ಕಂಪನಿ ಕ್ಯಾಂಪು ಮಾಡಿತ್ತು. ಅವರ ಬಿಡಾರದ ಬಳಿಯಲ್ಲಿಯೇ ಒಂದು ಸಾರ್ವಜನಿಕ ಬಾವಿಯಿತ್ತು. ನಾಟಕ ಕಂಪನಿ ಸಿಬ್ಬಂದಿ ಅಲ್ಲಿಯೆ ಸ್ನಾನ ಮಾಡುತ್ತಿದ್ದರು, ಬಟ್ಟೆ ಒಗೆಯುತ್ತಿದ್ದರು. ಇದರಿಂದ ಬಾವಿಯ ಸುತ್ತಲೂ ಕೊಳಚೆಯಾಯಿತು. ಪುರಸಭೆಯವರು ಪಂಚಾಕ್ಷರಿ ಗವಾಯಿಗಳಿಗೆ "ಸಾರ್ವಜನಿಕವಾಗಿ ಕ್ಷಮಾಪಣೆ ಕೇಳಬೇಕು, ಇಲ್ಲವೆ ೫೦ ರೂ. ದಂಡ ತೆರಬೇಕು" ಎಂದು ನೋಟೀಸು ಕೊಟ್ಟರು. ಪಂಚಾಕ್ಷರಿ ಗವಾಯಿಗಳು ಪುರಸಭೆ ಕಚೇರಿಗೆ ಹೋಗಿ ತಿಳಿಸಿಹೇಳಿ ಇನ್ನೊಮ್ಮೆ ಹೀಗಾಗದಂತೆ ನೋಡಿಕೊಳ್ಳುವುದಾಗಿ ಭರವಸೆ ಕೊಟ್ಟರೂ ಅಧಿಕಾರಿಗಳು ಒಪ್ಪಲಿಲ್ಲ.

ಅಂದು ರಾತ್ರಿ, ಇನ್ನೇನು ಪರದೆ ಸರಿಯಬೇಕು, ಪಾತ್ರಗಳು ಪ್ರವೇಶಿಸಬೇಕು. ಪರದೆ ಸರಿಯಿತು. ಆದರೆ ಪ್ರವೇಶಿಸಿದವರು ಪಂಚಾಕ್ಷರಿ ಗವಾಯಿಗಳು.

"ಸಹೃದಯಿ ಸಾರ್ವಜನಿಕರೆ, ನಮ್ಮ ಶಿಷ್ಯವೃಂದ ನಿಮಗೆ ಉಂಟುಮಾಡಿದ ತೊಂದರೆಗೆ ನಾನು ವಿಷಾದಿಸುತ್ತೇನೆ. ನಮಗೆ ತುಂಬ ಬೇಸರವಾಗಿರುವುದರಿಂದ ಇಲ್ಲಿ ನಾವು ನಾಟಕ ಆಡಲು ಇಷ್ಟಪಡುವುದಿಲ್ಲ. ಈಗಲೇ ಇಲ್ಲಿಂದ ಹೊರಟು ಗದಗಿನಲ್ಲಿಯೆ ಶಿವಪೂಜೆ ಮಾಡುವೆವು. ನೀವು ನಾಟಕಕ್ಕೆ ಕೊಟ್ಟ ಪ್ರವೇಶಧನ ವಾಪಸು ಕೊಡುತ್ತೇವೆ."

ಅಂದು ಎಂಟುನೂರು ರೂ. ಸಂಗ್ರಹವಾಗಿತ್ತು.

## ಬಣ್ಣಿಸಲದೆಂತು ನಿನ್ನ ಮಹಿಮೆಯೇನು ?

ಒಮ್ಮೆ ನಿಡಗುಂದಿಕೊಪ್ಪದಲ್ಲಿರುವಾಗ ಪಂಚಾಕ್ಷರಿ ಗವಾಯಿಗಳ ಶಿಷ್ಯರು ಸ್ನಾನಕ್ಕೆಂದು ಬಾವಿಗೆ ಹೋಗಿದ್ದರು. ಈಜಾಟದಲ್ಲಿ ನಿರತರಾಗಿರುವಾಗ ಎಲಿವಾಳ ಬಸವಣ್ಣಯ್ಯನ ಲಿಂಗ ಕಳಚಿ ತಳ ಸೇರಿತು. ಎಲ್ಲ ಹುಡುಗರೂ ಎಷ್ಟು ಸಾರೆ ಮುಳುಗಿ ಹುಡುಕಿದರೂ ಸಿಗಲಿಲ್ಲ. ಲಿಂಗವಿಲ್ಲದೆ ಪ್ರಸಾದವಿಲ್ಲ. ಗುರುಗಳೇನೆನ್ನುವರೊ ಎನ್ನುವ ಭಯ. ಈ ವಾರ್ತೆ ತಿಳಿದು ಪಂಚಾಕ್ಷರಿ ಗವಾಯಿಗಳೇ ಬಾವಿಯ ಬಳಿಗೆ ಧಾವಿಸಿದರು. "ಏನ ಹೇಳತೀರಿ ? ಭಕ್ತಿಯಿಂದ ಹುಡುಕಿದರೆ ದೀನಬಂಧು ಲಿಂಗಯ್ಯ ಸಿಗಲಾರನೆ ? ಮುಳುಗಿರಿ ಈ ಸಲ, ನೋಡೋಣ" ಎಂದು ಹುರಿದುಂಬಿಸಿದರು. ಬಾವಿಯ ತಳದಲ್ಲಿದ್ದ ಲಿಂಗಯ್ಯ ಒಬ್ಬನ ಕೈಗೆ ಹತ್ತಿದ. ಶಿಷ್ಯರು ಗುರುವಿನ ಮಹಿಮೆಯನ್ನು ಕೊಂಡಾಡಿದರು.

ಒಮ್ಮೆ ಪಂಚಾಕ್ಷರಿ ಗವಾಯಿಗಳು ಭಿಕ್ಷಕ್ಕೆ ಬರುವುದಾಗಿ ಹೊಂಬಳ ಗ್ರಾಮದವರಿಗೆ ಹೇಳಿಕಳಿಸಿದರು. ಆಗ ಅಲ್ಲಿ ಅನಾವೃಷ್ಟಿ. ಜನ ಮುಗಿಲ ಮಾರಿಯನ್ನೇ ನೋಡುತ್ತಿದ್ದರು. ಹೊಂಬಳದ ಭಕ್ತರು "ತಾವು ದಯಮಾಡಿಸುವುದಾದರೆ ಜೊತೆಗೆ ಮಳೆರಾಯನನ್ನೂ ಕರೆದುಕೊಂಡು ಬರಬೇಕು. ಅಂದರೆ ಜನ ಹಾಡಿ ಹರಸ್ಯಾರು" ಎಂದು ಅರಿಕೆ ಮಾಡಿಕೊಂಡರು. ಗವಾಯಿಗಳು "ಕುಮಾರೇಶನ ಕರುಣೆಯಿದ್ದರೆ ಮಳೆಗೇನು ಬರ. ಅದೂ ಆಗಬಹುದು" ಎಂದು ಪರಿವಾರದೊಡನೆ ಹೊಂಬಳಕ್ಕೆ ಹೊರಟರು. ಅವರು ಬಂದ ರಾತ್ರಿಯೆ ಮಳೆ ರಪರಪ ಸುರಿಯಿತು.

ಆ ತಿಂಗಳ ಕೊನೆಯ ಪಾಡ್ಯದ ದಿನ "ಸಿದ್ಧರಾಮೇಶ್ವರ" ನಾಟಕ ಆಡುವುದೆಂದು ನಿರ್ಧರಿತವಾಗಿತ್ತು. ಮಳೆ ಬಿಟ್ಟಿರಲಿಲ್ಲ. ನಾಟಕ ಬೇಡವೆಂದರು ಗ್ರಾಮಸ್ಥರು. ಆಡಿಯೇ ತೀರುವುದೆಂದರು ಪಂಚಾಕ್ಷರಿ ಗವಾಯಿಗಳು. ಗದಗಿನಿಂದ ನಾಟಕದ ಸರಂಜಾಮು ಬಂತು. ನಾಟಕ ಆರಂಭವಾಯಿತು. ಸ್ವತಃ ಪಂಚಾಕ್ಷರಿ ಗವಾಯಿಗಳೆ ತಬಲಾಕ್ಕೆ ಕುಳಿತರು. ಪುಟ್ಟರಾಜ ಗವಾಯಿಗಳು ಹಾರ್ಮೋನಿಯಂ ಬಾರಿಸಿದರು. ಜನ ಕಿಕ್ಕಿರಿದಿತ್ತು. ಬೆಳಿಗ್ಗೆ ಮೂರು ಗಂಟೆಗೆ ನಾಟಕ ಮುಕ್ತಾಯವಾಯಿತು. ಊರ

ಪ್ರಮುಖರು ಗವಾಯಿಗಳನ್ನು ಅಭಿನಂದಿಸಿದರು. ಆಗ ಗವಾಯಿಗಳು "ಇನ್ನು ಕೂಡಲೆ ಮನೆ ಸೇರಿರಿ. ಮಳೆರಾಯ ನಾಟಕ ಮುಗಿಯುವ ದಾರಿಯನ್ನೇ ನೋಡು ತ್ತಿದ್ದಾನೆ" ಎಂದು ನಕ್ಕು ಹೇಳಿದರು. ಎಲ್ಲರೂ ಮನೆ ಸೇರಿದ್ದರೋ ಇಲ್ಲವೋ, ಮಳೆ ಧೋ ಎಂದು ಸುರಿಯಬೇಕೆ ?

ಪಂಚಾಕ್ಷರಿ ಗವಾಯಿಗಳು ಎರಡು ಕಾಯಕ ಮಾಡುತ್ತಿದ್ದರು. ಒಂದು, ಸಂಗೀತ ವಿದ್ಯಾದಾನ. ಎರಡು, ಸಂಗೀತಶಾಲೆಗೆ ಧನಸಂಗ್ರಹ. ಒಮ್ಮೆ ನಾಟಕ ಕಂಪನಿ ಧಾರವಾಡ ಜಿಲ್ಲೆಯಲ್ಲಿ ಸಂಚರಿಸಬೇಕಿತ್ತು. ಒಬ್ಬ ಮಹನೀಯರು ದೇಣಿಗೆ ನೀಡುವುದಾಗಿ ವಚನವಿತ್ತಿದ್ದರು. ಅವರ ಊರಿಗೆ ಪಂಚಾಕ್ಷರಿ ಗವಾಯಿಗಳು ಹೋದರು. ಅವರು ಊರಲ್ಲಿರಲಿಲ್ಲ. ಕಿಸೆಯಲ್ಲಿ ಒಂದು ಒಡಕು ಕಾಸೂ ಇಲ್ಲ. ಇನ್ನು ಏನು ಮಾಡಬೇಕೆಂದು ಚಿಂತಾಕ್ರಾಂತರಾಗಿ ರೈಲ್ವೆ ನಿಲ್ದಾಣದ ಕಲ್ಲುಬೆಂಚಿನ ಮೇಲೆ ಕುಮಾರೇಶನನ್ನು ನೆನೆಯುತ್ತ ಕುಳಿತರು. ಒಬ್ಬ ವ್ಯಕ್ತಿ ಬಂದು, "ನೀವು ಪಂಚಾಕ್ಷರಿ ಗವಾಯಿಗಳಲ್ಲವೆ ?" ಎಂದು ಕೇಳಿದ. "ಹೌದಪ್ಪಾ, ಏನಾಗಬೇಕಿತ್ತು ?" "ಬಳ್ಳಾರಿಯ ಒಬ್ಬ ಶ್ರೀಮಂತರು ಇನ್ನೂರು ರೂಪಾಯಿ ಕಳಿಸಿದ್ದಾರೆ. ದಯವಿಟ್ಟು ಸ್ವೀಕರಿಸಬೇಕು." ಪಂಚಾಕ್ಷರಿ ಗವಾಯಿಗಳಿಗೆ ಹೋದ ಜೀವ ಮರಳಿದಂತಾಯಿತು. ಊರಿಗೆ ಬಂದ ತಕ್ಷಣ ಬಳ್ಳಾರಿಯ ಶ್ರೀಮಂತರಿಗೆ ಕೃತಜ್ಞತಾ ಪತ್ರ ಬರೆದರು. ಕೆಲವು ದಿನಗಳಾದ ಮೇಲೆ ಒಂದು ಆಶ್ಚರ್ಯ ಕಾದಿತ್ತು. ಬಳ್ಳಾರಿಯಿಂದ ಉತ್ತರ ಬಂತು :

"ಪೂಜ್ಯ ಮಹನೀಯರೆ,

ನೀವು ಹಣಕ್ಕಾಗಿ ಬರೆದ ಪತ್ರ ತಲುಪಲಿಲ್ಲ. ನಾನು ಹಣ ಕಳಿಸಲಿಲ್ಲ. ನಮಗೆ ಹಣ ಬಂದಿದೆಯೆಂದು ಬರೆಯುತ್ತೀರಿ. ನಿಮಗೆ ನನ್ನ ಹೆಸರಿನಲ್ಲಿ ಯಾರು ಹಣ ಕೊಟ್ಟರೊ ಅದೂ ತಿಳಿಯದು."

ಹಣ ಕೊಟ್ಟವರಾರೆಂಬುದು ಕೊನೆಯವರೆಗೂ ನಿಗೂಢವಾಗಿಯೆ ಉಳಿಯಿತು. ಎಲ್ಲವೂ ಕುಮಾರೇಶನ ಕೃಪೆಯೆಂದು ಪಂಚಾಕ್ಷರಿ ಗವಾಯಿಗಳು ಬಗೆದರು.

## ಪರಿಪೂರ್ಣದೆಡೆಗೆ

ಬಾಲಕ ಗದಿಗೆಯ್ಯ ಕುಮಾರಸ್ವಾಮಿಗಳ ಅನುಗ್ರಹದಿಂದ ಪರುಷ ಮುಟ್ಟಿದ ಲೋಹದಂತಾದ. ಪಂಚಾಕ್ಷರಿ ಗವಾಯಿಗಳಾಗಿ ಮಾರ್ಪಟ್ಟ. ಮದುವೆಯಾಗ ಬೇಕೆಂಬ ಯೌವನಸಹಜ ಆಸೆ ಅಂಕುರಿಸಿತು. ಆದರೆ ಕಣ್ಣ ಮುಂದಣ ಮಾಯೆಯ ಪರದೆ ಹರಿಯಿತು. ಕಾಮವನ್ನು ಮೆಟ್ಟಿನಿಂತರು. ಅಪ್ಪಟ ಬ್ರಹ್ಮಚರ್ಯ ವ್ರತಿ ಗಳಾದರು. ಚಂಚಲಚಿತ್ತವು ಶಿವಯೋಗದಲ್ಲಿ ತದೇಕಚಿತ್ತವಾಯಿತು. ಲಿಂಗಾಂಗ ಸಮರಸರಾದರು.

ಕುಮಾರಸ್ವಾಮಿಗಳ ಉಪದೇಶಾಮೃತದಂತೆ ಜಾತಿ ವಿಜಾತಿಯೆನ್ನದೆ ಸರ್ವ ಜಾತಿಗಳ ಮಕ್ಕಳನ್ನು ತಮ್ಮ ಶಾಲೆಗೆ ಸೇರಿಸಿಕೊಂಡು, ಎಂಥ ಕಷ್ಟಕಾಲದಲ್ಲೂ ಅನ್ನ ದಾನ, ವಿದ್ಯಾದಾನ ಮಾಡಿದರು. ತಮ್ಮ ನಂತರವೂ ಆ ಕಾರ್ಯ ನಿರಾತಂಕವಾಗಿ ಸಾಗುವಂತೆ ವ್ಯವಸ್ಥೆ ಮಾಡಿಟ್ಟು ಹೋದರು. ಪಂಚಾಕ್ಷರಿ ಗವಾಯಿಗಳ ಏಕಮೇವಾ ದ್ವಿತೀಯ ಆಶ್ರಮದಲ್ಲಿ ವಿದ್ಯೆ ಕಲಿತು ಗಾಯನಪಟುಗಳು, ವಾದನಪಟುಗಳು, ಕೀರ್ತನಪಟುಗಳು, ನಟರು, ಆಯುರ್ವೇದ ವೈದ್ಯರು ಆಗಿ ಕೀರ್ತಿ ಗಳಿಸಿದವರು ಅದೆಷ್ಟು ಸಾಸಿರವೊ ?

ಮೊದಲು ರೇಷ್ಮೆ ವಸ್ತ್ರ ಧರಿಸುತ್ತಿದ್ದವರು ಗಾಂಧೀಜಿಯ ಪ್ರೇರಣೆಯಿಂದ (ಗಾಂಧೀಜಿ ಹುಬ್ಬಳ್ಳಿಗೆ ಬಂದಾಗ ದರ್ಶನ ಪಡೆದಿದ್ದರು) ಸೊಲ್ಲಾಪುರದ ಧನಶೆಟ್ಟಿ ಮಲ್ಲಪ್ಪನವರ ಪ್ರಭಾವದಿಂದ ಖಾದಿ ವಸ್ತ್ರಧಾರಿಗಳಾದರು. ಸ್ವದೇಶಾಭಿಮಾನಿ ಗಳಾದರು. ವಿದೇಶಿ ಔಷಧವನ್ನೆಂದೂ ಮುಟ್ಟಲಿಲ್ಲ.

ಪಂಚಾಕ್ಷರಿ ಗವಾಯಿಗಳು ಸ್ವಂತದ ಸುಖವನ್ನು ಒಂದಿನಿತೂ ಬಯಸಿದವರಲ್ಲ. ಕಾಡಶೆಟ್ಟಿಹಳ್ಳಿಯಲ್ಲಿ ಅವರಿಗಿದ್ದುದು ಪುತ್ರವರ್ಗದ ಮಠ. ಅದಕ್ಕೆ ೧೬-೧೮ ಕೂರಿಗಿ ಜಮೀನು. ಶಿಷ್ಯವರ್ಗದ ಮಠದಲ್ಲಿ ಶಿಷ್ಯರಿಗೆ ಅಧಿಕಾರವಿರುತ್ತದೆ. ಪುತ್ರವರ್ಗದ ಮಠದಲ್ಲಿ ಪುತ್ರರಿಗೆ. ಪಂಚಾಕ್ಷರಿ ಗವಾಯಿಗಳು ಅಧಿಕಾರಕ್ಕೆ ಬಂದ ಮೇಲೆ ೮ ಕೂರಿಗಿ ಜಮೀನನ್ನು ಶಿವಯೋಗ ಮಂದಿರದಲ್ಲಿ ಸ್ಥಾಪಿತವಾಗಲಿದ್ದ ಮುದ್ರಣಾಲಯಕ್ಕಾಗಿ, ಮಿಕ್ಕಿದ್ದನ್ನು ಸಂಸ್ಥೆಗಾಗಿ ದಾನ ಮಾಡಿದರು.

ಪಂಚಾಕ್ಷರಿ ಗವಾಯಿಗಳು ಹುಟ್ಟುಕುರುಡರಾಗಿದ್ದರೂ ನಾದಜ್ಞಾನಚಕ್ಷುಗಳಾ ಗಿದ್ದರು. ಅವರ ಜೀವನ ಶೃತಿಗೊಳಿಸಿದ ವೀಣೆಯಂತಿತ್ತು. ನಾದಯೋಗದಿಂದಲೇ ನಾದಬ್ರಹ್ಮನನ್ನು ಒಲಿಸಿಕೊಂಡರು. ನಾದಾಂತವನ್ನೆ ವೇದಾಂತವೆಂದು ನಂಬಿ ಪರಿಪೂರ್ಣದೆಡೆಗೆ ನಡೆದವರು ಪಂಚಾಕ್ಷರಿ ಗವಾಯಿಗಳು.

## ಉಭಯ ಗಾನವಿಶಾರದ ಶ್ರೀ ಪಂಚಾಕ್ಷರಿ ಗವಾಯಿಗಳು

ಎನ್ಕೆ

ದೈವ ವಂಚಿತರಾದ ಶ್ರೀ ಪಂಚಾಕ್ಷರಿ ಗವಾಯಿಗಳು ಜಗತ್ತಿನಲ್ಲಿ ಹೊರಗಿನ ಬೆಳಕು ಹೇಗಿರುತ್ತದೆ ಎಂಬುದನ್ನು ಕಂಡವರಲ್ಲ. ಹೊರಗಿನ ಬೆಳಕೆಂದರೆ ಬರಿ ಥಳಕು, ಅದು ನಿಜವಾದ ಬೆಳಕಲ್ಲ ಎಂದು ತಿಳಿದೇ ಏನೋ ಹೊರಗಿನ ಕಣ್ಣಿಲ್ಲದೆ ಹುಟ್ಟಿ ಒಳಗಣ್ಣಿನ ಒಳಬೆಳಕಿನಲ್ಲೇ ಬಾಳಿದರು; ಬಾಳಿನ ಮೇಲ್ಮೆಯನ್ನು ಸಾಧಿಸಿದರು. ಗುರುಕರುಣೆ ಅವರ ಬೆನ್ನಿಗಿತ್ತು. ಈ ಕರುಣೆಯೆ ಅವರ ಬೆನ್ನ ಹಿಂದಿನ ಬೆಳಕಾಗಿ, ಕರುಣಾಳುವಾಗಿ ಈ ಒಳಗಣ್ಣಿನ ಕಲಾವಿದರನ್ನು ಗುರಿಯತ್ತ ಕರೆದೊಯ್ಯಿತು.

ಮನುಷ್ಯನಿಗೆ ಯಾವುದೆ ಒಂದು ಇಂದ್ರಿಯ ಊನವಾದರೆ ಉಳಿದ ಇಂದ್ರಿಯಗಳಲ್ಲಿ ಒಂದಂತೂ ಅಧಿಕ ಚೈತನ್ಯಮಯವಾಗಿ ಕಾರ್ಯ ಮಾಡುತ್ತ ಇದ್ದ ಕೊರತೆಯನ್ನು ತುಂಬುತ್ತದಂತೆ. ಈ ಮಾತು ನಿಜ. ಪಂಚಾಕ್ಷರಿ ಗವಾಯಿಗಳಿಗೆ ಇಲ್ಲದ ಎರಡು ಕಣ್ಣುಗಳು ಎರಡೂ ಕಿವಿಗಳ ಸ್ಥಾನ ಚೈತನ್ಯಗಳನ್ನು ತುಂಬಿದವು. ಕಂಗಳ ಬೆಳಕು ಕಿವಿಗಳ ಶ್ರುತಿಯಾಗಿ ಮಾರ್ಪಟ್ಟಿತ್ತು. ಅವರ ಕಿವಿಗಳ ಶ್ರವಣಶಕ್ತಿ, ಶ್ರುತಿ ವಿಮರ್ಶೆ ಎಷ್ಟು ತೀಕ್ಷ್ಣವಾಗಿದ್ದುವೆಂಬುದಕ್ಕೆ ಒಂದು ದೃಷ್ಟಾಂತ. ಗವಾಯಿಗಳ ಉತ್ತರ ವಯಸ್ಸಿನಲ್ಲಿ ಒಮ್ಮೆ ಅವರು ಸಂಚಾರದಲ್ಲೆಲ್ಲಾ ಉಪಯೋಗಿಸುತ್ತಿದ್ದ ತಂಬಿಗೆ ಕಳವಾಗಿ ಹೋಯಿತು, ಒಂದೂರಿನ ವಾಸ್ತವ್ಯದಲ್ಲಿ. ಮನುಷ್ಯನ ನಂಬಿಗೆ ಹೋದರೆ ದೃಢ ಸಂಕಲ್ಪದಿಂದ ಅದನ್ನು ಮತ್ತೆ ಪಡೆದುಕೊಳ್ಳಬಹುದು. ಆದರೆ ತಂಬಿಗಿ ಹೋದರೆ ? ಮನುಷ್ಯ ತಮ್ಮ ಬಿಗಿಯನ್ನೇ ಕಳೆದುಕೊಂಡಂತಲ್ಲವೆ? ತಂಬಿಗೆ ಕಳೆದಾಗ ಹಾಗಾಯಿತು ಗವಾಯಿಗಳ ಅವಸ್ಥೆ. ಆದರೆ ಒಂದು ದಿನ ಗವಾಯಿಗಳು ಆ ತಂಬಿಗೆ ಕಳೆದ ಕೆಲವೆ ದಿನಗಳಲ್ಲಿ ಅದೇ ಊರಲ್ಲಿ ಸಂಜೆ ಅಡ್ಡಾಡುತ್ತ ಬರುವಾಗ ಒಂದು ಮನೆಯ ಹೆಣ್ಣುಮಗಳು ಮನೆಯ ಪಾತ್ರೆಗಳನ್ನು ತಿಕ್ಕುತ್ತಲಿದ್ದರು. ಮಣ್ಣು ಹಚ್ಚಿ ನೆಲಕ್ಕೆ ಸವರಿ ಪಾತ್ರೆ ತಿಕ್ಕುವಾಗ ಗವಾಯಿಗಳ ಕಿವಿಗೆ ಏನೋ ಒಂದು ಕಂಚಿನ ನಾದ ಕೇಳಿಸಿತು. ಕ್ಷಣಹೊತ್ತು ನಿಂತು ಆ ಕಂಚಿನ ನಾದವನ್ನಾಲಿಸಿದರು. ಸಮೀಪಕ್ಕೆ ಹೋದರು.

ಕೈಬಳೆಗಳ ಸಪ್ಪಳ. "ತಾಯೀ ತಂಬಿಗೆ ತಿಕ್ಕುತಾ ಇದ್ದೀರಾ ?" ಎಂದು ಪ್ರಶ್ನಿಸಿದರು. "ಹೌದ್ರೀಯಪ್ಪ"—ಎಂದು ಉತ್ತರ. "ತಾಯೀ, ಆ ತಂಬಿಗಿ ವ್ಯಾಗ ಪಂಚಾಕ್ಷರಿ ಗವಾಯಿ ಅಂತ ಹೆಸರದೆ ಏನು ನೋಡ್ರಿ" ಎಂದರು. "ಹೌದ್ರಿ ಹೆಸರು ಐತ್ರಿ. ಆದರ ನಾವು ಇದನ್ನ ಒಬ್ಬರಿಂದ ಕೊಂಡಕೊಂಡೀವಿ" ಎಂದುತ್ತರಿಸಿದಳು ಆ ತಾಯಿ ! ಕೊನೆಗೆ ಶೋಧ ನಡೆಸಿದ ಮೇಲೆ ಗವಾಯಿಗಳಿಗೆ ಅವರ ಕಂಚಿನ ತಂಬಿಗೆ ಕೈಗೆ ಬಂತು. ಅಂಧರ ಶ್ರುತಿವಂತ ಕಿವಿಗಳು, ಅದರಲ್ಲೂ ಸಂಗೀತಜ್ಞ ಅಂಧರ ಕಿವಿಗಳು ಎಷ್ಟು ಸೂಕ್ಷ್ಮವಾಗಿರುತ್ತವೆ ಎನ್ನಲಿಕ್ಕೆ ಇದು ಒಂದು ಉದಾಹರಣೆ.

ಇಂಥ ಸೂಕ್ಷ್ಮ ಸಂವೇದನಾತ್ಮಕ ಶ್ರವಣೇಂದ್ರಿಯವುಳ್ಳ ಪಂಚಾಕ್ಷರಿ ಗವಾಯಿಗಳು ಜನ್ಮಾಂಧರಾಗಿದ್ದರೂ ಗುರುಗಳಾದ ಹಾನಗಲ್ಲ ಕುಮಾರೇಶ್ವರ ಶಿವಯೋಗಿಗಳ ಕೃಪೆ, ಪ್ರೇರಣೆಗಳಿಂದ–ಅನೇಕ ಕಷ್ಟ ಕಾರ್ಪಣ್ಯಗಳನ್ನೆದುರಿಸಿಯೂ–ಉಭಯ ಗಾಯನಾಚಾರ್ಯರನಿಸಿ ಅದ್ವಿತೀಯ ಸಂಗೀತ ಪಾಂಡಿತ್ಯವನ್ನು ಪಡೆದು ಅದನ್ನು ಅಂಧ ಅನಾಥ ಶಿಷ್ಯರಿಗೆ ವಿತರಣೆ ಮಾಡಿದರು. ಗುರುಕರುಣೆಯ ಕಿರಣಗಳಿಂದ ಗವಾಯಿಗಳ ಭಕ್ತಿ-ಕಲೆಗಳ ವ್ಯಕ್ತಿತ್ವ ಅರಳಿತು. ಗುರು ಕುಮಾರೇಶ್ವರಸ್ವಾಮಿಗಳ ಕೃಪೆ ಕಿರಿದಾಗಿರಲಿಲ್ಲ. ಪಂಚಾಕ್ಷರಿಗಳ ಬದುಕಿನ ತಿರುವೆ ಬದಲಾಯಿತು. ಪೂಜ್ಯ ಕುಮಾರ ಸ್ವಾಮಿಗಳು ನಿರ್ದೇಶಿಸಿದ ಮಾರ್ಗದಲ್ಲಿ ತಾವು ನಡೆದು ನೂರಾರು ಜನ ಅಂಧ ಶಿಷ್ಯರ ಭವಿಷ್ಯ ಸುಂದರವಾಗುವಂತೆ ರೂಪಿಸಿದರು. ಶಿಷ್ಯ ಜೀವಿಯಾಗಿಯೇ ಬಾಳಿದರು. ಬ್ರಹ್ಮಚರ್ಯೆಯ ಭೀಷ್ಮ ಪ್ರತಿಜ್ಞೆಗೈದು ತಚ್ಚೇತನದಿಂದ ನೂತನ ವ್ಯಾವಹಾರಿಕ ವೇದಾಂತವನ್ನು ಬದುಕಿದರು. ಗದುಗಿನ ದಾನಿ ಬಸರಿ ಗಿಡದ ವೀರಪ್ಪನವರ ಸಹಾಯದಿಂದ ಸ್ಥಾಪಿತವಾದ ವೀರೇಶ್ವರ ಪುಣ್ಯಾಶ್ರಮವು ಇಂದು ಗಾನ ಪ್ರಪಂಚಕ್ಕೆ ನೀಡಿರುವ ಕೊಡುಗೆಯೇ ಒಂದು ಇತಿಹಾಸವಾಗುತ್ತದೆಯೆಂದು 'ಗಾನಯೋಗಿ ಎಂಬ ಗ್ರಂಥದ ಲೇಖಕರಾದ ಪ್ರೊ. ವಿ. ಬಿ. ಹಿರೇಮಠ ಅವರು ಹೇಳಿದ ಮಾತು ಹುರುಳಿನದಾಗಿದೆ. ಪಂಚಾಕ್ಷರ ಗವಾಯಿಗಳ ತರುವಾಯ ಅವರ ಪಟ್ಟಶಿಷ್ಯರಾದ ಶ್ರೀ ಪುಟ್ಟರಾಜ ಗವಾಯಿಗಳು ಆ ಪುಣ್ಯಾಶ್ರಮವನ್ನು ನಾಟಕ ಸಂಗೀತಗಳ ಪ್ರಗತಿಪಥದಲ್ಲಿ ಯಶಸ್ವಿಯಾಗಿ ಮುನ್ನಡೆಯಿಸಿದ್ದಾರೆ. ಸ್ವತಃ ಸಂಗೀತಗಾರರೂ ವಾದ್ಯಕಾರರೂ ನಾಟಕಕಾರರೂ ಆಗಿರುವ ಪುಟ್ಟರಾಜಗವಾಯಿಗಳು ನಾಟಕ ಕಂಪನಿ ಕಟ್ಟಿದರು, ನಾಟಕ ರಚನೆ ಮಾಡಿ ಯಶಸ್ವಿ ಪ್ರಯೋಗ ನಡೆಸಿದರು. ಪುಣ್ಯಾಶ್ರಮದಿಂದ ಹೊರಡುವ 'ಪಂಚಾಕ್ಷರ' ಪ್ರಕಾಶ ಪತ್ರಿಕೆ ಸಂಗೀತಾಭ್ಯಾಸಿಗಳಿಗೆ, ಆಧ್ಯಾತ್ಮ ಆಸಕ್ತರಿಗೆ ಉತ್ತಮ ಆರೋಗ್ಯಕರ ವಿಚಾರಗಳನ್ನು ಒದಗಿಸುತ್ತಿದೆ.

ಪಂಚಾಕ್ಷರಿ ಗವಾಯಿಗಳು 'ಉಭಯಗಾನ ವಿಶಾರದ'ರೆಂದು ಗೌರವಿಸಲ್ಪಟ್ಟವರು. ಕಳೆದ ಶತಮಾನದ ಕೊನೆಯವರೆಗೆ ಉತ್ತರ ಕರ್ನಾಟಕದ ಭಾಗದಲ್ಲೆಲ್ಲ ಕರ್ನಾಟಕ ಸಂಗೀತವೆ ಪ್ರಧಾನವಾಗಿ ರೂಢಿಯಲ್ಲಿತ್ತು. ಧಾರವಾಡದಲ್ಲಿ ಗುರುನಾಥ

ರಾವ್‌ಪಾಠಕ್ ಅವರು ಒಂದು ಕರ್ನಾಟಕ ಸಂಗೀತ ಶಾಲೆಯನ್ನೆ ಆರಂಭಿಸಿದರು. ಕರ್ನಾಟಕ ಸಂಗೀತಪಾಠ ಹೇಳಿಕೊಡಲು ತಂಜಾವೂರಿನಿಂದ ಕಲಿತುಬಂದ ವೆಂಕಣ್ಣ ಚಿಮಲಗಿ ಎಂಬ ಶಿಕ್ಷಕರನ್ನು ನೇಮಿಸಲಾಗಿತ್ತು. ಆದರೆ ದುರ್ದೈವದಿಂದ ಅವರು 1893ರಲ್ಲಿ ಸಿಡಿಲು ಬಡೆದು ಸತ್ತರು. ಅದರಿಂದಾಗಿ ಕರ್ನಾಟಕ ಸಂಗೀತಕ್ಕೇ ಸಿಡಿಲು ಬಡಿದಂತಾಯಿತು ಅಂತ ಮುದವೀಡು ಕೃಷ್ಣರಾಯ ಚುರಮುರಿ ಕನ್ನಡ ಶಾಕುಂತಲದ ಮುನ್ನುಡಿಯಲ್ಲಿ ಹೇಳಿದ್ದಾರೆ. ಖ್ಯಾತ ಹಿಂದೂಸ್ತಾನೀ ಗಾಯಕಿ ಡಾ. ಗಂಗೂಬಾಯಿ ಹಾನಗಲ್ಲ ಅವರ ತಾಯಿ ಕರ್ನಾಟಕ ಸಂಗೀತವನ್ನೇ ಕಲಿತು ಕರತಲಾಮಲಕ ಮಾಡಿ ಕೊಂಡವರು. ಆದರೆ ತಮ್ಮ ಮಗಳು ಶ್ರೇಷ್ಠ ಹಿಂದೂಸ್ತಾನೀ ಗಾಯಕಿ ಆಗ ಬೇಕೆಂದು ಗಂಗೂಬಾಯಿಯ ಕಿವಿಯ ಮೇಲೆ ಕರ್ನಾಟಕ ಸಂಗೀತದ ಸ್ವರಗಳು ಸಹ ಬೀಳಬಾರದು ಎಂದುಕೊಂಡು ತಾವು ಕರ್ನಾಟಕ ಸಂಗೀತ ಹಾಡುವುದನ್ನೇ ಬಿಟ್ಟುಬಿಟ್ಟರಂತೆ. ಎಂದರೆ ಕರ್ನಾಟಕೀ ಸಂಗೀತದ ಬಗ್ಗೆ ಬರಬರುತ್ತ ಆಸ್ಥೆ ಕಡಿಮೆ ಆಗಹತ್ತಿತು.

ಆದರೆ ಪಂಚಾಕ್ಷರಿ ಗವಾಯಿಗಳು ಮೊದಲು ಕರ್ನಾಟಕ ಸಂಗೀತದಲ್ಲಿಯೇ ಪರಿಣತಿ ಪಡೆದರು. ಶಿರಾಳ ಕೊಪ್ಪದ ವಿದ್ವಾನ್ ಗದಿಗೆಪ್ಪನವರಲ್ಲಿ ಕರ್ನಾಟಕ ಸಂಗೀತವನ್ನು ಅಭ್ಯಸಿಸಿ ಅಪೂರ್ವ ಪ್ರಗತಿಯನ್ನು ಹೊಂದಿದರು. ಕರ್ನಾಟಕ ಸಂಗೀತವನ್ನು ಗದಿಗೆಪ್ಪ ಮಾಸ್ತರರು ಮೈಸೂರಿನಲ್ಲಿ ಅಭ್ಯಾಸ ಮಾಡಿದವರಾಗಿದ್ದರು. ಪಂಚಾಕ್ಷರಿ ಗವಾಯಿಗಳಿಗೆ ಮೊದಲು ಗದಿಗೆಯ್ಯನೆಂದೆ ತಂದೆ ತಾಯಿಗಳು ಹೆಸರಿಟ್ಟದ್ದು. ಈಗ ಅವರ ಕರ್ನಾಟಕ ಸಂಗೀತ ಶಿಕ್ಷಣದ ಗುರುಗಳ ಹೆಸರೂ ಅದೇ ಇತ್ತು. ಕುಮಾರ ಗದಿಗೆಪ್ಪನಿಗೆ ಗುರುಬಸವ ಎಂಬ ಅಣ್ಣನೂ ಇದ್ದ. ಬಾಲಕರಿಬ್ಬರೂ ಅಂಧರು. ಹಾನಗಲ್ಲಿನ ಪೂಜ್ಯ ಕುಮಾರಸ್ವಾಮಿಗಳು ಈ ಅಂಧ ಲವಕುಶ ಮಕ್ಕಳಿಬ್ಬರ ಸಂಗೀತ ಪ್ರತಿಭೆಗೆ ಬೆರಗಾಗಿ, ಅವರ ಹಾಡುಗಾರಿಕೆಯನ್ನು ಮೆಚ್ಚಿಕೊಂಡು, ಆ ಮಕ್ಕಳ ಉನ್ನತಿ ಯೋಗಕ್ಷೇಮ ವಿಚಾರ, ಶಿಕ್ಷಣಗಳ ಹೊಣೆಯನ್ನು ಹೊತ್ತುಕೊಂಡರು ಗುರು ಬಸವ, ಗದಿಗೆಯ್ಯ ಇಬ್ಬರಿಗೂ ಆಕಸ್ಮಿಕವಾಗಿ ಹಾನಗಲ್ಲಿಗೆ ಬಂದಿದ್ದ ತಂಜಾವೂರಿನ ಗವಾಯಿಗಳೊಬ್ಬರ ಬಳಿ ಕೃತಿ-ವರ್ಣಗಳ ಅಭ್ಯಾಸವಾಯಿತು. ಆದರೆ ಇದು ನಡೆದದ್ದು ಮೂರೇ ತಿಂಗಳು, ವಿದ್ವಾಂಸರು ಮತ್ತೆ ತಂಜಾವೂರಿಗೆ ಹಿಂತಿರುಗಿದರು. ಮುಂದೆ ಶಿರಾಳಕೊಪ್ಪದ ಗದಿಗೆಪ್ಪನವರಲ್ಲಿ ಶಿರಾಳಕೊಪ್ಪದಲ್ಲಿಯೇ ಕರ್ನಾಟಕ ಸಂಗೀತ ಶಿಕ್ಷಣಕ್ಕೆ ಮೊದಲಾಯಿತು. ಸ್ವರಗಳ ತಿಳುವಳಿಕೆಯೊಡನೆ ಮೇಳಕರ್ತ ರಾಗದ ಆರೋಹ, ಅವರೋಹ, ಮೂರ್ಛನಾ, ಗ್ರಾಮ, ಗತಿ-ತಾಳ ಲಯಗಳ ಕಲ್ಪನೆಯೊಡನೆ ಶಾಸ್ತ್ರೀಯ ಗಾಯನ ಪದ್ಧತಿಯನ್ನು ಮನಮುಟ್ಟುವಂತೆ ಗುರುಗಳು ಕಲಿಸಿದರು. ಗುರು ಹಾಕಿಕೊಟ್ಟ ಜಾಡಿನಲ್ಲಿಯೆ ಮಕ್ಕಳಿಬ್ಬರೂ ಮುಂದರಿದರು. ಆಗಾಗ ಕುಮಾರ ಸ್ವಾಮಿಗಳು ಶಿರಾಳಕೊಪ್ಪದವರೆಗೂ ದಯಮಾಡಿಸಿ ಮಕ್ಕಳಿಬ್ಬರ ಸಂಗೀತ ಪ್ರಗತಿ ಯನ್ನು ಕಂಡು ಸಂತೋಷಿಸುತ್ತಿದ್ದರು. ಈ ಸಂಗೀತ ಶಿಕ್ಷಣ ಎಂಟು ವರ್ಷಕಾಲ

ಮುಂದರಿದು ಮಕ್ಕಳು ಕರ್ನಾಟಕ ಸಂಗೀತ ಪದ್ಧತಿಯಲ್ಲಿ ನಿಷ್ಣಾತರಾದರು. ಸಂಗೀತ ಶಿಕ್ಷಣವು ಒಂದು ಘಟ್ಟಕ್ಕೆ ಬಂದು ಮುಟ್ಟಿದಾಗ ಗುರು ಗದಿಗೆಪ್ಪನವರು ಮಕ್ಕಳನ್ನು ಹಾನಗಲ್ಲಿಗೆ ತಂದುಬಿಟ್ಟರು. ತಾವು ಕಲಿಸುವಷ್ಟನ್ನೆಲ್ಲಾ ಕಲಿಸಿರುವುದಾಗಿ ಹೇಳಿ, ಇನ್ನೂ ಹೆಚ್ಚಿಗೆ ಕಲಿಸಬೇಕಾಗಿದ್ದರೆ ಮಕ್ಕಳನ್ನು ಮೈಸೂರಿನಲ್ಲಿಡಬಹುದೆಂದು ಸಲಹೆ ಮಾಡಿದರು. ಮೈಸೂರಿನಲ್ಲಿ ದೊಡ್ಡ ದೊಡ್ಡ ವಿದ್ವಾಂಸರಾದ ಬಿಡಾರಂ ಕೃಷ್ಣಪ್ಪ, ವೀಣೆ ಶೇಷಣ್ಣನವರಂತಹವರ ಸಂಗೀತಶ್ರವಣ ಸುಯೋಗವೂ ದೊರಕಬಹುದೆಂದು ಸೂಚಿಸಿದರು. ಹಾನಗಲ್ಲಿನಲ್ಲಿ ಸಾರ್ವಜನಿಕವಾಗಿ ಈ ಯುವ ಸೋದರರ ಸಂಗೀತ ಕಚೇರಿಗಳು ಗುರುಗಳ ಸಮ್ಮುಖದಲ್ಲಿಯೇ ಜರುಗಿ ಕೇಳುಗರೆಲ್ಲ ಮಕ್ಕಳ ಸಂಗೀತ ವಿದ್ಯಾಸಾಧನೆಗೆ ತಮ್ಮ ಕೌತುಕವನ್ನು ವ್ಯಕ್ತಪಡಿಸಿ, ಮಕ್ಕಳನ್ನು ಕೊಂಡಾಡಿದರು. ಶ್ರೀ ಕುಮಾರಸ್ವಾಮಿಗಳು ಗುರುಗಳಿಗೆ ತಮ್ಮ ಸಂತೋಷ, ಕೃತಜ್ಞತೆಗಳನ್ನು ವ್ಯಕ್ತ ಪಡಿಸಿ ಅವರನ್ನು ಸಾರ್ವಜನಿಕ ಸಮ್ಮುಖದಲ್ಲಿ ಸನ್ಮಾನಿಸಿ ಸಂಭಾವಿಸಿದರು. ಪ್ರತಿ ತಿಂಗಳೂ ಗುರುಗಳಿಗೆ ಮಕ್ಕಳ ಸಂಗೀತ ಶಿಕ್ಷಣಕ್ಕಾಗಿ ಗೌರವಧನವನ್ನು ಕಳಿಸುತ್ತಲೆ ಇದ್ದರು.

ಇನ್ನೇನು ಮಕ್ಕಳನ್ನು ಮೈಸೂರಿಗೆ ಕಳಿಸುವ ತಕ್ಕ ಏರ್ಪಾಡು ಮಾಡಬೇಕೆನ್ನು ವಷ್ಟರಲ್ಲಿ ಗದಿಗೆಯ್ಯ, ಗುರುಬಸವ ಇಬ್ಬರೂ ನೆಲವಿಗಿ ಎಂಬ ಹಳ್ಳಿಯಲ್ಲಿ ಸ್ಥಾಪಿತ ವಾದ ಶಿವಯೋಗ ಮಂದಿರದಲ್ಲಿ ವಟುಗಳೊಂದಿಗೆ ಇರಲೆಂದು ಹೋದರು. ಆದರೆ ಅಲ್ಲಿ ಅಣ್ಣ ಗುರುಬಸವ ಮಾವಿನಹಣ್ಣು ತಿಂದದ್ದೇ ನೆವವಾಗಿ ಮಾರಿಕಾ ಬೇನೆಗೆ ತುತ್ತಾಗಿ ಹಾಡಿಕೊಂಡು ಆಡಾಡುತ್ತಿರುವ ಬಾಲಕ ಕೈಬಿಟ್ಟುಹೋಗಿ ಶಿವನಪಾದ ಸೇರಿಬಿಟ್ಟ. ಗುರುಗಳಿಗೆ ಎಂತಹ ಪೆಟ್ಟು ! ಭರವಸೆಯ ಒಬ್ಬ ಶಿಷ್ಯನನ್ನು ಕಳೆದುಕೊಂಡಾಗ ಶ್ರೀ ಕುಮಾರಸ್ವಾಮಿಗಳಿಗೆ ಒಂದು ಕಣ್ಣೇ ಹೋದಂತಾ ಗಿತ್ತು. ಇನ್ನು ಆ ತಾಯಿ-ತಂದೆಗಳಿಗೆ ಏನು ಉತ್ತರ ಹೇಳಬೇಕು ಎಂದು ದಿಗ್ಭ್ರಾಂತ ರಾದರು. ಬಡ ತಂದೆ ತಾಯಿಗಳು ಭವಿಷ್ಯದ ಬೆಳಕು ಕಾಣದ ಮಕ್ಕಳನ್ನು ಗುರುಗಳ ಉಡಿಯಲ್ಲಿ ಹಾಕಿದ್ದರು ! ಆಯಿತು, ತಾಯ್ತಂದೆಗಳಿಗೆ ಸಮಾಧಾನ ಹೇಳಿದರು. ಅವರ ವ್ಯಥೆಯೆ ತಮ್ಮ ವ್ಯಥೆಯೆಂದು ತಿಳಿದಿದ್ದ ಗುರುಗಳನ್ನು ನೆರೆನಂಬಿದ್ದ ಅವರು ಗದಿಗೆಯ್ಯನ ಭವಿಷ್ಯ ಗುರುಗಳಿಗೆ ಬಿಟ್ಟದ್ದು ಎಂದುಕೊಂಡು ಸಮಾಧಾನ ತಂದು ಕೊಂಡರು.

ಅಣ್ಣನನ್ನು ಕಳೆದುಕೊಂಡ ಹದಿನೆಂಟು ವರ್ಷಗಳ ತರುಣ, ತಮ್ಮ ಗದಿಗೆಯ್ಯ ಮೈಸೂರಿಗೆ ಹೊರಡಲು ಅಣಿಯಾದ. ಅಧ್ಯಾತ್ಮ ಗುರುಗಳಾದ ಕುಮಾರಸ್ವಾಮಿ ಗಳು ಜೀವದ ಶಿಷ್ಯನನ್ನು ಮೈಸೂರಿಗೆ ಕಳಿಸುವಾಗ ಬರಿ ಆಶೀರ್ವಾದಗಳನ್ನಷ್ಟೆ ನೀಡಲಿಲ್ಲ, ಕಷ್ಟಸಹಿಷ್ಣುತೆಯೆಂದರೇನು, ಕಷ್ಟವನ್ನು ಹೇಗೆ ಪ್ರಸಾದವೆಂದು ಸ್ವೀಕರಿಸ ಬೇಕು, ಕಷ್ಟವೆ ಒಂದು ಹಬ್ಬವೆಂದು ತಿಳಿಯುವ ಮನಃಪ್ರವೃತ್ತಿಯನ್ನು ಕರುಣಿ ಸಿದರು, ಈ ಮಾನಸಿಕ ಸಿದ್ಧತೆಯಿಂದ ಗದಿಗೆಯ್ಯನವರು ಮೈಸೂರಿಗೆ ಸಂಗೀತ

ತಸಯಾತ್ರೆ ಕೈಕೊಂಡರು. ಮೈಸೂರಿನಲ್ಲಿ ಮೊದಲು ಬಿಡಾರಂ ಕೃಷ್ಣಪ್ಪನವರನ್ನು ಕಂಡರು. ಕೃಷ್ಣಪ್ಪನವರು ಗದಿಗೆಯ್ಯನ ಕಂಠಶ್ರೀಗೆ ತುಂಬ ಸಂತುಷ್ಟರಾದರು. ಗದಿಗೆಯ್ಯನಿಗೆ ಬಿಡಾರಂ ಅವರ ಸನ್ನಿಧಿಯಲ್ಲೇ ಸಂಗೀತಾಭ್ಯಾಸ ಮಾಡಬೇಕೆಂಬ ಅಭಿಲಾಷೆಯಿತ್ತು. ಬಿಡಾರಂ ಅಂದು ಕರ್ನಾಟಕ ಹಾಡುಗಾರಿಕೆಗೆ ಇನ್ನೊಂದು ಹೆಸರಾಗಿತ್ತು. ಬಿಡಾರಂ ಅವರೂ ಆತನನ್ನು ಶಿಷ್ಯನೆಂದು ಸ್ವೀಕರಿಸಲು ಸಂತೋಷ ಪಟ್ಟುಕೊಂಡಿದ್ದರು ಆದರೆ ಅವರ ಮಾತೃಶ್ರೀಯವರ ಆರೋಗ್ಯ ವಿಷಮಿಸಿ ಹದ ಗೆಟ್ಟಿದ್ದರಿಂದ ಅವರು ಮೈಸೂರು ಬಿಡಬೇಕಾಗಿ ಬಂತು. ಅಂತೆಯೆ ಗದಿಗೆಯ್ಯ ನನ್ನು ಪಿಟೀಲು ವೆಂಕಟಯ್ಯನವರಲ್ಲಿಗೆ ನಿರ್ದೇಶಿಸಿ ಅಲ್ಲಿ ಈ ಅಂಥ ಶಿಷ್ಯ ತಕ್ಕ ಸಂಗೀತ ಶಿಕ್ಷಣ ಮುಂದುವರಿಸಬೇಕೆಂದು ಆಶೀರ್ವದಿಸಿದರು.

ವೆಂಕಟರಮಣಯ್ಯನವರು ಮೈಸೂರು ಕುರುಡರ ಶಾಲೆಯ ಪಿಟೀಲು ವಿದ್ವಾಂಸರೆಂದು ಶಿಕ್ಷಕರಾಗಿದ್ದರು. ಆ ಕುರುಡ–ಮೂಕರ ಶಾಲೆಗೆ ಗದಿಗೆಯ್ಯ ಸೇರಿ ಕೊಂಡ. ನಾಲ್ಕು ವರ್ಷಕಾಲ ವೆಂಕಟರಮಣಯ್ಯನವರು ಈ ಶಿಷ್ಯನಿಗೆ ತಮ್ಮ ಸಂಗೀತ ವಿದ್ಯೆಯನ್ನು ಕರುಣಿಸಿದರು. ಗದಿಗೆಯ್ಯನು ಒಳ್ಳೆ ಆಸಕ್ತಿ ತತ್ಪರತೆಗಳಿಂದ ಗುರುಗಳು ಹೇಳಿಕೊಟ್ಟ ಪಾಠಗಳನ್ನು ಕಲಿತುಕೊಂಡನು. ಹೊಸ ಹೊಸ ರಾಗಗಳು ಹೊಸ ಹೊಸ ವರ್ಣಗಳು, ಕೃತಿಗಳು ಗದಿಗೆಯ್ಯನ ಬತ್ತಳಿಕೆಯಲ್ಲಿ ಸೇರಿದವು. ಏಕ ಲವ್ಯನ ಶ್ರದ್ಧೆಯಿಂದ ಕಲಿತ ಈ ಶಿಷ್ಯನು ಹಾಡುಗಾರಿಕೆಯಲ್ಲಿ ನೈಪುಣ್ಯವನ್ನು ಸಾಧಿಸಿ ದನು. ನಾಲ್ಕು ವರ್ಷಗಳ ಸಾಧನೆಯಿಂದ ಮೈಸೂರಿನ ತುಂಬೆಲ್ಲ ಸಂಗೀತ ಕಾರ್ಯ ಕ್ರಮಗಳನ್ನು ನೀಡಿ ರಸಿಕರ ಸಾನುಭೂತಿಯನ್ನು ಜನಾನುರಾಗವನ್ನು ಸಂಪಾದಿ ಸಿದನು. ವೀಣೆಯ ಶೇಷಣ್ಣನವರಂತೂ ಈ ಅಂಥ ಕಲಾವಿದನ ಗಂಧರ್ವ ವಿದ್ಯೆಗೆ ಮುಗ್ಧರಾಗಿ ಅವನನ್ನು ಶ್ರೀ ಮನ್ಮಹಾರಾಜರ ಕಣ್ಣಿಗೆ ಹಾಕಬೇಕೆಂದು ಇಚ್ಛೆ ವ್ಯಕ್ತ ಪಡಿಸಿದಾಗ ಗುರುನಿಷ್ಠೆಯ ಗದಿಗೆಯ್ಯ ಹಾನಗಲ್ ಕುಮಾರಸ್ವಾಮಿಗಳ ಒಪ್ಪಿಗೆ, ಆಶೀರ್ವಾದಗಳಿಲ್ಲದೆ ತಾನು ಅರಮನೆ ಹೇಗೆ ಪ್ರವೇಶಿಸುವುದು ಎಂದಾಗ ಆ ವಿಚಾರ ಅಲ್ಲಿಯೆ ಉಳಿಯಿತು.

ಮೈಸೂರಿನಲ್ಲಿ ಗದಿಗೆಯ್ಯ ವಾಸವಾಗಿದ್ದುದು ಅಲ್ಲಿಯ ಗೌರೀಶಂಕರ ಸ್ವಾಮಿ ಗಳ ಮಠದಲ್ಲಿ. ಗದಿಗೆಯ್ಯ ಈ ಸ್ವಾಮಿಗಳನ್ನು ತನ್ನ ತತ್ವಪದ, ವಚನಗಳು, ಭಜನೆಗಳಿಂದ ಮೆಚ್ಚಿಸಿದಾಗ ಗೌರೀಶಂಕರ ಸ್ವಾಮಿಗಳು ಒಂದು ಸಮಾರಂಭದಲ್ಲಿ ಗದಿಗೆಯ್ಯನಿಗೆ "ಪಂಚಾಕ್ಷರ" ಎಂಬ ಪುನರ್ನಾಮಕರಣದಿಂದ ಗೌರವಿಸಿದರು. ಅಂದಿ ನಿಂದ ಗದಿಗೆಯ್ಯ ಪಂಚಾಕ್ಷರಿ ಗವಾಯಿ ಎಂದು ಕರೆಯಲ್ಪಡತೊಡಗಿದರು. ಮುಂದೆ ಪಂಚಾಕ್ಷರಿಗವಾಯಿ ಪೂಜ್ಯ ಕುಮಾರಸ್ವಾಮಿಗಳ ಆದೇಶದ ಮೇರೆಗೆ ಬಾಗಿಲುಕೋಟೆ ಯಲ್ಲಿ ಜರುಗಲಿರುವ ವೀರಶೈವ ಮಹಾಸಭೆಯ ನಾಲ್ಕನೆಯ ಅಧಿವೇಶನದಲ್ಲಿ ಸಂಗೀತ ಕಾರ್ಯಕ್ರಮವನ್ನು ಸಾದರ ಪಡಿಸಲು ಮೈಸೂರು ಬಿಟ್ಟು ಬರಬೇಕಾಯಿತು. ಆಗ ಮೈಸೂರು ಬಿಟ್ಟು ಬಂದ ಪಂಚಾಕ್ಷರಿಗವಾಯಿಗಳಿಗೆ ಮತ್ತೆ ಮೈಸೂರಿಗೆ ಹೋಗುವ

ದಾಗಲಿಲ್ಲ. ಹಾನಗಲ್ಲ ಕುಮಾರ ಸ್ವಾಮಿಗಳು ಗದಿಗೆಯ್ಯನ ಹೆಸರು "ಪಂಚಾಕ್ಷರ" ಎಂದು ಬದಲಾಗಿರುವುದಕ್ಕೆ ತಮ್ಮ ಆನಂದಾನುಭೂತಿಗಳನ್ನು ವ್ಯಕ್ತಪಡಿಸಿದರಲ್ಲದೆ ಈ ವೀರಶೈವ ಮಹಾಧಿವೇಶನದಲ್ಲಿ "ಪಂಚಾಕ್ಷರ ಗವಾಯಿ" ಎಂಬ ನಾಮಕರಣವನ್ನು ದೃಢಪಡಿಸಿದರು. ಈ ಮಹಾಸಭೆಯಲ್ಲಿ ಪಂಚಾಕ್ಷರ ಗವಾಯಿಗಳು ವಚನಗಳನ್ನು, ತತ್ವದ ಪದಗಳನ್ನು. ಭಕ್ತಿ ಗೀತೆಗಳನ್ನು ಕೇಳಿಸಿದ್ದಲ್ಲದೆ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಬಹುಜನ ಹಿತಾಯ, ಬಹುಜನ ಸುಖಾಯ ಹಾಡಿ ಅವರ ಮನ ತಣಿಸಿದರು.

ಆದರೆ ಕೆಲವೊಂದು ಮೂಲೆಗಳಿಂದ ಹಲವರು ಪಂಚಾಕ್ಷರ ಗವಾಯಿಗಳ ಹಾಡುಗಾರಿಕೆಯನ್ನು ಕೇಳಿ ಒಂದಿಷ್ಟು ಮೂಗು ಮುರಿದು ಮಾತನಾಡಿದುದು ಹಾನಗಲ್ಲ ಕುಮಾರ ಸ್ವಾಮಿಗಳಿಗೆ ಒಂದಿಷ್ಟು ನೋವನ್ನುಂಟುಮಾಡಿತು. ಆದಕ್ಕಾಗಿಯೇ ಮತ್ತೊಮ್ಮೆ ಪಂಚಾಕ್ಷರ ಗವಾಯಿಗಳ ಕಚೇರಿಯೊಂದನ್ನೇರ್ಪಡಿಸಿ ಅನೇಕ ಸಂಗೀತಜ್ಞರನ್ನು ಆಮಂತ್ರಿಸಿದರು. ಆ ಬಹುಜನ ರಸಜ್ಞರ ಸಭೆಯಲ್ಲಿ ಪಂಚಾಕ್ಷರಿ ಗವಾಯಿಗಳು ಸಾದರಪಡಿಸಿದ ಸಂಗೀತವು ತುಂಬ ಮೆಚ್ಚುಗೆಯಾಗಿ ಪಂಚಾಕ್ಷರಂಗೆ "ಪಂಡಿತ ಪಂಚಾಕ್ಷರ ಗವಾಯಿ" ಎಂಬ ಬಿರುದನ್ನು ತಂದಿತು. ಇದೊಂದು ಮುಖ್ಯ ಘಟ್ಟ.

ಪಂಡಿತ ಬಿರುದನ್ನು ಪಡೆದ ಪಂಚಾಕ್ಷರಿ ಗವಾಯಿಗಳು ಉತ್ತರ ಕರ್ನಾಟಕದ ಈ ಭಾಗದಲ್ಲೆಲ್ಲಾ ಹಿಂದುಸ್ತಾನೀ ಸಂಗೀತ ಪದ್ಧತಿ ಹೆಚ್ಚು ಪ್ರಿಯವಾಗಿರುವುದನು ಕಂಡುಕೊಂಡರು. ಬಸವಲಿಂಗಶಾಸ್ತ್ರಿಗಳೆಂಬ ಕೀರ್ತನಕಾರರಿಂದ ಕೀರ್ತನ ಕಲೆಯನ್ನು ಕರಗತ ಮಾಡಿಕೊಂಡ ಪಂಚಾಕ್ಷರಿಗವಾಯಿಗಳು ತಾವಿನ್ನು ಹಿಂದುಸ್ತಾನೀ ಪದ್ಧತಿಯಲ್ಲಿ ಸಂಗೀತ ಕಲೆಯನ್ನು ಬೆಳೆಯಿಸಿಕೊಳ್ಳುವುದನ್ನು ನಿರ್ಧರಿಸಿದರು.

ಈ ಸಂದರ್ಭದಲ್ಲಿ ಒಂದು ಮಹತ್ವದ ವಿಷಯವನ್ನು– ಹಿಂದುಸ್ತಾನೀ ಸಂಗೀತ ಪ್ರಾಚುರ್ಯಕ್ಕೆ ಸಂಬಂಧಿಸಿದಂತೆ– ಹೇಳುವುದು ಅವಶ್ಯವಿದೆ. ಅದೇನೆಂದರೆ ಉತ್ತರ ಕರ್ನಾಟಕದಲ್ಲಿ ಹಿಂದುಸ್ತಾನೀ ಸಂಗೀತ ಪದ್ಧತಿಯ ಪ್ರಸರಣೆಯ ಪ್ರೇರಕ ಶಕ್ತಿಯಾಗಿ ಕಾರ್ಯಮಾಡಿದ ಹಿಂದುಸ್ತಾನೀ ಸಂಗೀತದ ತ್ರಿವೇಣೀ ಸಂಗಮದಂತಿದ್ದ ಭಾಸ್ಕರ ಬುವಾ ಬಖಲೆ ಅವರು ಧಾರವಾಡದಲ್ಲಿ ನೆಲಸಿದ್ದು ಅನೇಕ ಹಿಂದುಸ್ತಾನೀ ಗಾಯಕರಿಗೆ ಒಂದು ಆಕರ್ಷಣೆ ಆದುದು. ಶ್ರೀ ಭಾಸ್ಕರಬುವಾ ಬಖಲೆ ಅವರು ೧೮೮೦ರಿಂದ ೧೮೮೬ರರ ವರೆಗೆ ಧಾರವಾಡ ಗಂಡು ಮಕ್ಕಳ ಟ್ರೈನಿಂಗ್ ಕಾಲೇಜ್‌ನಲ್ಲಿ ಸಂಗೀತ ಶಿಕ್ಷಕರಾಗಿ ಕೆಲಸ ಮಾಡಿದರು. ಆಗಿನ ಶಿಕ್ಷಣಾಧಿಕಾರಿ ಸಹಸ್ರಬುದ್ಧೆ ಅವರು ಬಖಲೆ ಅವರನ್ನು ಧಾರವಾಡಕ್ಕೆ ತರುವ ಪ್ರಯತ್ನದಲ್ಲಿ ಯಶಸ್ವಿ ಆದರು. ಭಾಸ್ಕರ ಬುವಾ ಬಖಲೆ ಅವರಿಂದಾಗಿ ಹಿಂದುಸ್ತಾನಿ ಸಂಗೀತವು ಉತ್ತರ ಕರ್ನಾಟಕದಲ್ಲಿ ವಿಜೃಂಭಿಸುವಂತಾಯಿತು. ಬಖಲೆ ಅವರು ಸ್ವತಃ ಗ್ವಾಲೇರ, ಆಗ್ರಾ, ಜಯಪೂರ ಹೀಗೆ ಮೂರು ಘರಾಣೆಗಳನ್ನು ಪ್ರತಿನಿಧಿಸುತ್ತಿದ್ದರು. ಗ್ವಾಲೇರ ಘರಾಣೆಯ ಫೈಜ್ ಮಹಮದ್, ಆಗ್ರಾ ಘರಾಣೆಯ ನತ್ತನಖಾ, ಮತ್ತು ಅಲ್ಲಾ ದಿಯಾಖಾಂ

ಜೈಪೂರ ಘರಾಣೆ ಈ ಮೂವರು ಗುರುಗಳ ಗರಡಿಯಲ್ಲಿ ಪಳಗಿದ ಅಭಿಜಾತ ಗಾಯಕರೆನಿಸಿ ನಾಮಾಂಕಿತರಾಗಿದ್ದರು. ಮೈಸೂರು ದಸರಾ ಮಹೋತ್ಸವಕ್ಕಾಗಿ ಆಮಂತ್ರಿಸಲ್ಪಡುತ್ತಿದ್ದ ಔತರೇಯ ಗಾಯಕರೆಲ್ಲಾ ಮೈಸೂರಲ್ಲಿ ತಮ್ಮ ಕಾರ್ಯಕ್ರಮ ಪೂರೈಸಿಕೊಂಡು ಮಹಾರಾಜರಿಂದ ಸಂಭಾವಿತರಾಗಿ ಹಿಂತಿರುಗಿ ಬರುವಾಗ ಬಖಲೆ ಬುವಾ ಅವರಿಂದ ಆಕರ್ಷಿತರಾಗಿ ಧಾರವಾಡದಲ್ಲಿ ತಂಗಿ, ಸಂಗೀತ ಕಾರ್ಯಕ್ರಮಗಳನ್ನು ನೀಡಿ ತಮ್ಮ ಪ್ರಯಾಣವನ್ನು ಮುಂದುವರಿಸುತ್ತಿದ್ದರು. ಬಖಲೆ ಬುವಾ ಅವರ ಗುರು ನತ್ತನಖಾ ಮೈಸೂರು ಆಸ್ಥಾನದಲ್ಲೇ ಗೌರವಿಸಲ್ಪಟ್ಟಿರುವಾಗ ಆಗಾಗ ಧಾರವಾಡಕ್ಕೆ ಬಂದು ತಿಂಗಳೊಪ್ಪತ್ತು ವಾಸ್ತವ್ಯಮಾಡಿ ಹಿಂತಿರುಗುತ್ತಿದ್ದರು. ಈ ಅವಧಿಯಲ್ಲೇ ಬಖಲೆ ಅವರಿಗೆ ನತ್ತನಖಾ ಅವರ ಸಂಗೀತ ಪಾಠ ಲಭ್ಯವಾಗುತ್ತಿತ್ತು.

ಭಾಸ್ಕರ ಬುವಾ ಅವರು ಸಂಗೀತ ಶಿಕ್ಷಕರಾಗಿದ್ದಾಗ ಅವರ ಬಳಿ ಮಣೇಕರರ ಎ ಬ ಡ್ರಾಯಿಂಗ್ ಶಿಕ್ಷಕರೂ ಸಂಗೀತ ಕಲಿತು, ಸಂಗೀತ ಶಿಕ್ಷಕರಾಗಿಯೂ ಕೆಲಸ ಮಾಡುತ್ತಿದ್ದರು. ಧಾರವಾಡದ ಪ್ರಸಿದ್ಧ ಪಿತ್ರೆ ವಕೀಲರೂ ಭಾಸ್ಕರ ಬುವಾ ಅವರಲ್ಲೇ ಅಭ್ಯಾಸ ಮಾಡಿದರು. ಬಾಲ ಗಂಧರ್ವರೂ, ಮಾಸ್ತರ ಕೃಷ್ಣರಾವ್ ಇವರೂ ಸಹ ಶಿಷ್ಯತ್ವವಹಿಸಿದರು. ಬಾಲಗಂಧರ್ವರು ತಮ್ಮ ರಂಗಭೂಮಿಗಾಗಿ ಖಾದಿಲಕರ ಕೃತ ರುಕ್ಮಿಣೀ ಸ್ವಯಂವರ ನಾಟಕ ಕೂಡಿಸುವಾಗ ಅದರಲ್ಲಿಯ ನಾಟಕ ಗೀತೆಗಳಿಗೆ ಚಾಲಿಗಳನ್ನು ಭಾಸ್ಕರ ಬುವಾ ಅವರು ಬೇರೆ ಬೇರೆ ಪ್ರಸಿದ್ಧ ರಾಗಗಳ ಹಿಂದೀ ಚೀಜುಗಳ ಧಾಟಿಗಳನ್ನೆ ಕೊಟ್ಟರು. ಇದರಿಂದಾಗಿ ಬಾಲಗಂಧರ್ವರ ನಾಟಕಗಳಲ್ಲಿ ಹಿಂದೀ ಚೀಜುಗಳ ಚಾಲಿಯ ಮೇಲೆ ಮರಾಠಿ ನಾಟ್ಯ ಗೀತೆಗಳನ್ನು ಸೇರಿಸುವ ಒಂದು ಪರಂಪರೆಯೆ ಬೆಳೆಯಿತು. ಈ ರಂಗ ಗೀತೆಗಳ ಪರಂಪರೆ ಕನ್ನಡ ವೃತ್ತಿ-ರಂಗಭೂಮಿ ಮೇಲೂ ಆಯಿತು. ಪಂಚಾಕ್ಷರಗವಾಯಿಗಳು ನಾಟಕ ಕಂಪನಿಯನ್ನು ಕಟ್ಟಿ ಅನೇಕ ನಾಟಕ ಪ್ರಯೋಗಗಳಲ್ಲಿ ಪರಿಶ್ರಮವಹಿಸಿದರು. ಮುಂದೆ ಅವರ ಪಟ್ಟದ ಶಿಷ್ಯರಾದ ಶ್ರೀ ಪುಟ್ಟರಾಜಗವಾಯಿಗಳೂ ಪಂಚಾಕ್ಷರಿಗಳು ಕಟ್ಟಿ- ಮುನ್ನಡೆಸಿದ್ದ ರಂಗತೇರನ್ನು ಮುಂದರಿಸಿಕೊಂಡು ನಡೆದರು. ಹೀಗೆ ಭಾಸ್ಕರ ಬುವಾ ಬಖಲೆ ಅವರ ಮೂಲಕ ಮರಾಠಿ ರಂಗಭೂಮಿಯನ್ನು ಪ್ರವೇಶಿಸಿದ ಹಿಂದುಸ್ತಾನೀ ಸಂಗೀತ ಪದ್ಧತಿಯೂ ಕನ್ನಡ ವೃತ್ತಿ ರಂಗಭೂಮಿಗೂ ಹಬ್ಬಿತು. ಭಾಸ್ಕರ ಬುವಾ ಬಖಲೆ ಅವರ ನೇರ ಶಿಷ್ಯ ಪಿತ್ರೆ ವಕೀಲರಾದರೆ, ಪಿತ್ರೆ ವಕೀಲರ ನೇರ ಶಿಷ್ಯ ಗುರುರಾವ್ ದೇಶಪಾಂಡೆ. ಮುಂದೆ ಅವರು ರಾಮಕೃಷ್ಣ ಬುವಾ ವಝೆ ಅವರ ಶಿಷ್ಯತ್ವವನ್ನು ವಹಿಸಿದರು. ಹೀಗೆ ಉತ್ತರ ಕರ್ನಾಟಕದಲ್ಲಿ ಹಿಂದುಸ್ತಾನೀ ಸಂಗೀತ ವ್ಯಾಪಿಸಿತು.

ಇತ್ತ ಪಂಚಾಕ್ಷರಗವಾಯಿಗಳು ಮೊದ ಮೊದಲಿಗೆ ಹಿಂದುಸ್ತಾನೀ ಸಂಗೀತದತ್ತ ಒಲಿದು, ಅತ್ತ ವಿಶೇಷ ಆಕರ್ಷಿತರಾಗಿ ಗ್ರಾಮಫೋನ್ ಕಂಪನಿಯ ರಾಗದಾರೀ ಧ್ವನಿ ಮುದ್ರಿಕೆಗಳನ್ನು ಕೇಳಿ ಕೇಳಿ ತಮ್ಮಷ್ಟಕ್ಕೆ ತಾವೇ ಹಿಂದುಸ್ತಾನಿ ಗಾಯಕಿ ರೂಢಿಸಿಕೊಳ್ಳತೊಡಗಿದರು. ತಮ್ಮ ಬಳಿ ಒಂದು ಗ್ರಾಮೊಫೋನ್ ಪೆಟ್ಟಿಗೆಯನ್ನು

ಆಯ್ದ ಹಿಂದುಸ್ತಾನೀ ರಾಗಗಳ ಚೀಜುಗಳ ರಿಕಾರ್ಡುಗಳನ್ನು ಕೊಂಡುಕೊಂಡರು ಅವರು ರಾಗಬದ್ಧ ಧ್ವನಿ ಮುದ್ರಿಕೆಗಳನ್ನು ಎಷ್ಟು ಮಟ್ಟಿಗೆ ರೂಢಿಸಿಕೊಂಡರೆಂದರೆ ಗಾನಮುದ್ರಿಕೆಗಳ ಹಾಡುಗಾರಿಕೆಯ ಕಾರ್ಯಕ್ರಮಗಳನ್ನ ಮಾಡಹತ್ತಿದರು. ಇದು ಜನರಲ್ಲಿಯೂ ಒಂದು ಹೊಸ ಅಭಿರುಚಿಯನ್ನು ನಿರ್ಮಾಣ ಮಾಡಿತು. ಹಿಂದುಸ್ತಾನಿ ಸಂಗೀತ ಬಲ್ಲವರಿಂದ ಬೇಜುಗಳನ್ನೂ ಹಾಡುಗಾರಿಕೆಯ ಪದ್ಧತಿಯನ್ನು ಪಡೆದು ಕೊಂಡು ಪ್ರತಿಯಾಗಿ ಅವರಿಗೆ ತಾವು ಪ್ರಭುತ್ವ ಸಂಪಾದಿಸಿದ್ದ ಕರ್ನಾಟಕದ ಸಂಗೀತದ ಕೃತಿಗಳನ್ನು ಪರಿಚಯಿಸುತ್ತಿದ್ದರು.

ಆದರೆ ಇಷ್ಟಕ್ಕೆ ತೃಪ್ತರಾಗದೆ ಪಂಚಾಕ್ಷರಗವಾಯಿಗಳು ಹಿಂದುಸ್ತಾನೀ ಶಾಸ್ತ್ರೀಯ ಸಂಗೀತವನ್ನು ಪದ್ಧತಿ ಸೇರವಾಗಿ ಕಲಿತುಕೊಳ್ಳುವ ತಮ್ಮ ಪ್ರಬಲವಾದ ಇಚ್ಛೆಯನ್ನು ಗುರುಗಳಾದ ಕುಮಾರಸ್ವಾಮಿಗಳ ಬಳಿ ನಿವೇದಿಸಿಕೊಂಡಾಗ ಅವರು ಅಬ್ದುಲ್ ವಹೀದ್ ಖಾನರನ್ನು ಶಿವಯೋಗ ಮಂದಿರಕ್ಕೆ ಕರೆಯಿಸಿಕೊಂಡು ಗವಾಯಿ ಪಂಚಾಕ್ಷರರಿಗೆ ಹಿಂದುಸ್ತಾನೀ ಸಂಗೀತ ಕಲಿಸುವ ಏರ್ಪಾಡು ಮಾಡಿದರು. ಇದಕ್ಕಾಗಿ ಸಂಗೀತ ಗುರುಗಳಿಗೆ ಕೈತುಂಬ ವೇತನ ಕೊಡುವುದಕ್ಕೂ ಕುಮಾರಸ್ವಾಮಿಗಳು ಹಿಂದು ಮುಂದು ನೋಡಲಿಲ್ಲ. ಕಿರಾನಾ ಘರಾಣೆಯ ಹೆಸರಾಂತ ಅಬ್ದುಲ್ ವಹೀದ್ ಖಾನ್‌ರು ಹೀರಾಬಾಯಿ ಬಡೋದೆಕರ ಅವರಿಗೂ ಸಂಗೀತ ಗುರುಗಳಾ ದರು. ಅವರಿಗೆ ಸಲ್ಲಬೇಕಾದ ಸಂಭಾವನೆ ತಿಂಗಳಿಗೆ ನೂರೈವತ್ತು ರೂಪಾಯಿ, ಆ ದಿನಗಳಲ್ಲಿ.

ನಾಲ್ಕು ವರ್ಷಗಳವರೆಗೆ ಅಬ್ದುಲ್ ವಹೀದ್ ಖಾನ್ ಸಾಹೇಬರಲ್ಲಿ ಹಿಂದ ಸ್ತಾನೀ ಸಂಗೀತದ ಪರಿಶ್ರಮ ನಡೆದ ಮೇಲೆ ಗುರುಗಳು ತಮ್ಮ ಆರೋಗ್ಯದ ದೃಷ್ಟಿ ಯಿಂದ ಶಿವಯೋಗ ಮಂದಿರ ಬಿಟ್ಟು ಲಾಹೋರ್‌ನಲ್ಲಿ ನೆಲೆಸಬೇಕಾಯಿತು. ಇನ್ನು ಮುಂದೆ ಮತ್ಯಾವ ಸಂಗೀತ ಗುರುವನ್ನು ಶೋಧಿಸಬೇಕೆನ್ನುವಷ್ಟರಲ್ಲಿ ಮಿರ್ಜಿಯಲ್ಲಿ ವಾಸವಾಗಿದ್ದ ಖ್ಯಾತ ಗ್ವಾಲೇರ ಗಾಯಕಿ ಪದ್ಧತಿಯ ನೀಲಕಂಠ ಬುವಾ ಮಿರಜಕರ ಅವರನ್ನು ಕುಮಾರಸ್ವಾಮಿಗಳು ಶಿವಯೋಗ ಮಂದಿರಕ್ಕೆ ಕರೆಯಿಸಿಕೊಂಡರು. ಆಗಿನ ಹಿಂದುಸ್ತಾನೀ ಗಾಯಕರಲ್ಲಿ ನೀಲಕಂಠ ಬುವಾ ಅವರು ಸುಪ್ರಸಿದ್ಧರೂ ಅಗ್ರ ಮಾನ್ಯರೂ ಆಗಿದ್ದರು. ಮುಂದೆ ನೀಲಕಂಠ ಬುವಾ ಆಲೂರಮಠ ಅವರು ಮಲ್ಲಿ ಕಾರ್ಜುನ ಮನ್ಸೂರ್ ಬಸವರಾಜ ರಾಜಗುರು ಅವರಿಗೂ ಸಂಗೀತ ಗುರುಗಳಾಗಿ ಪಾಠ ಹೇಳುವ ಸಂದರ್ಭ ಒದಗಿಬಂತು. ಅವರು ಸಂಗೀತ ಕಲಿಸುವ ಪದ್ಧತಿ ಕ್ರಮ ಬದ್ಧವಾದುದಾಗಿತ್ತು. ನೀಲಕಂಠ ಬುವಾ ಅವರ ಗರಡಿಯಲ್ಲಿ ಪರಿಶ್ರಮ ಮಾಡಿದ್ದಾ ರೆಂದರೆ ಅವರು ಪ್ರವೀಣರೇ ಇರಬೇಕು ಎಂಬ ಒಂದು ಪ್ರತೀತಿ ಬೆಳೆದಿತ್ತು ನೀಲಕಂಠ ಬುವಾ ಅವರ ಬಗ್ಗೆ. ಪಂಚಾಕ್ಷರ ಬುವಾ ಅವರಿಗೆ ಮಿರಜಕರ ಅವರಿಂದ ಮೂರು ವರ್ಷ ಪೂರ್ತಿ ಸಂಗೀತ ಶಿಕ್ಷಣ ದೊರಕಿತು. ದಿನಾಲು ಎರಡು ಚೀಜುಗಳನ್ನು ಕಲಿಸು ತ್ತಿದ್ದರಂತೆ. ಪಂಚಾಕ್ಷರರು ಆ ಎರಡು ಬೇಜುಗಳನ್ನು ಶ್ರದ್ಧೆಯಿಂದ ಆತ್ಮಸತ್ತಾಗಿ

ಮಾಡಿಕೊಳ್ಳುವರು. ಗುರುಗಳು ಶಿಷ್ಯನ ಅರ್ಪಣ ಬುದ್ಧಿ, ಸತತ ನಿಧಿ ಧ್ಯಾಸ, ದೀರ್ಘತಾಲೀಮು ಇವುಗಳನ್ನು ಪ್ರತ್ಯಕ್ಷ ಕಂಡು ತುಂಬ ಪ್ರಸನ್ನರಾಗಿ, "ನಿಮ್ಮಂತಹ ರಿಗೆ ಸುಶಿಕ್ಷಣ ನೀಡುವ ಯೋಗ ಪ್ರಾಪ್ತವಾದುದೆನ್ನ ಸುದೈವ" ಎಂದು ಉದ್ಗಾರ ತೆಗೆಯಬೇಕಾದರೆ ಶಿಷ್ಯನ ಬಗ್ಗೆ ಗುರುಗಳಲ್ಲಿ ಏನೋದು ಅಪಾರ ವಿಶ್ವಾಸ ಬೆಳೆದಿದ್ದಿ ತೆಂಬುದನ್ನು ಊಹಿಸಿಕೊಳ್ಳಬಹುದಾಗಿದೆ.

ಅಂಥ ಗವಾಯಿಗಳು ಉಭಯಗಾನ ಪದ್ಧತಿಯಲ್ಲಿ ಎಷ್ಟೋ ಪಳಗಿದ್ದಾರೆ ಎಂಬ ಒಂದು ಹರ್ಷೋದ್ಗಾರ. ಪಂಚಾಕ್ಷರರ ಸಂಗೀತ ಕಚೇರಿಗಳನ್ನು ಕೇಳಿದವ ರೆಲ್ಲಾ ಮುಕ್ತ ಕಂಠದ ಮೆಚ್ಚುಗೆ ವ್ಯಕ್ತ ಮಾಡುತ್ತಿದ್ದರು. ಇವರ ಉಭಯ ಗಾಯಕ ಪದ್ಧತಿಯನ್ನು ಕೇಳಿದ ವಿದ್ವಾಂಸರು ತಮ್ಮ ಮೆಚ್ಚುಗೆ ಒಂದಿಷ್ಟು ಕಾಯಂ ಸ್ವರೂಪದ್ದಾಗಬೇಕೆಂದು ಬಯಸಿ ಅವರಿಗೆ "ಉಭಯ ಗಾಯನಾಚಾರ್ಯ" ಎಂಬ ಬಿರುದು ನೀಡಿ ಗೌರವಿಸಿದರು. ಈ ಉಭಯ ಗಾಯನಾಚಾರ್ಯರೆಂಬ ಗೌರವ ಗವಾಯಿಗಳನ್ನು ಅಷ್ಟಕ್ಕೆ ಸಂತೃಪ್ತ ಭಾವನೆಯಿಂದ ಇರಗೊಡಲಿಲ್ಲ. ಹಿಂದುಸ್ತಾನಿ ಗಾಯಕಿಯಲ್ಲಿ ಇನ್ನೂ ಪರಿಣತಿ ಪಡೆಯಬೇಕು, ಇನ್ನೂ ಪ್ರಾವೀಣ್ಯ ಹೆಚ್ಚಿಸಿಕೊಳ್ಳ ಬೇಕು ಎಂಬ ಹಂಬಲ. ಬೆಳಗಾವಿಯ ನಾಗನೂರ ಸ್ವಾಮಿಗಳ ಮಠದಲ್ಲಿ ಕ್ಯಾಂಪ್ ಮಾಡಿದಾಗ ಅಲ್ಲಿಯೆ ನೆಲೆಸಿದ್ದ ರಾಮಕೃಷ್ಣ ಬುವಾ ವಝೆ ಅವರಲ್ಲೂ ಒಂದಿಷ್ಟು ಶಿಷ್ಯತ್ವ ಸಾಧಿಸಬೇಕೆಂಬ ಅಭಿಲಾಷೆ. ಕಷ್ಟದ ಕಾಲದಲ್ಲೇ ತಿಂಗಳಿಗೆ ಮೂರು ನೂರು ರೂಪಾಯಿ ಫೀ ಹಣ ಕೊಟ್ಟು ನಾಲ್ಕು ತಿಂಗಳು ಹೇಳಿಸಿಕೊಂಡರು. ಶ್ರೀ ನಾಗನೂರ ಸ್ವಾಮಿಗಳೂ ಸಹಾಯ ನೀಡಿದರು. ಪಂಚಾಕ್ಷರರ ಗಾಯನಾಭೀಪ್ಸೆ ಈಡೇರಿತ್ತು. ಮುಂದೆ ಒಂದು ವರ್ಷಕಾಲ ಬಾಬೂರಾವ್ ಗವಾಯಿ ಅವರ ಬಳಿಯೂ ಒಂದು ವರ್ಷ ಸಂಗೀತ ತಪಶ್ಚರ್ಯೆ ನಡೆಸಿದರು. ಒಂದು ರೀತಿ ಹಿಂದುಸ್ತಾನೀ ಸಂಗೀತದಲ್ಲಿ ಒಂದು ಬಗೆಯ ಪರಿಪೂರ್ಣತೆಯನ್ನು ಕಂಡರು. ಇವರ ಸತತ ಸಂಗೀತಾಭೀಪ್ಸೆ ಎಷ್ಟು ಮಟ್ಟದ್ದಿದ್ದಿತೆಂದರೆ ಸ್ವತಃ ತಮ್ಮ ಶಿಷ್ಯರಲ್ಲೇ ಏನಾದರೂ ಹೆಚ್ಚಿನರಾಗ, ಚೀಜುಗಳಿದ್ದರೆ ಇನ್ನೇನಾದರೂ ಹೆಚ್ಚುಗಾರಿಕೆ ಕಂಡರೆ ಅದನ್ನು ಶಿಷ್ಯರ ಕಡಿಂದಲೆ ಹೇಳಿಸಿಕೊಳ್ಳುತ್ತಿದ್ದರು. ನೀಲಕಂಠ ಬುವಾ ಅವರಲ್ಲಿ ಕಲಿಯುವಾಗ ಶಿಷ್ಯ ಬಸವ ರಾಜ ರಾಜಗುರು ಮುಖಾಂತರ ಗುರು ನೀಲಕಂಠ ಬುವಾ ಅವರ ಪಾದ ಸೇವೆಯ ವ್ಯಾಜದಲ್ಲಿ ನಾಲ್ಕಾರು ಚೀಜುಗಳನ್ನು ಹೆಚ್ಚಿಗೆ ಪಡೆದುಕೋ– ಎಂದು ಪ್ರೇರೇಪಿಸಿ ಮುಂದೆ ತಾವೂ ಅದನ್ನು ಕಲಿತುಕೊಳ್ಳುವರು. ಎಂತಹ ಒಂದು ಕಲಿಯುವ ನಿಷ್ಠೆ!

ಶಾಸ್ತ್ರೀಯ ಸಂಗೀತ ಜನ ಮೆಚ್ಚುಗೆಯಾಗುವಂತೆ ಹಾಡಬೇಕಾದರೆ ಪಾಂಡಿತ್ಯ ಕ್ಕಿಂತ ಕುಶಲ ಬೇಕು. ಸಂಗೀತದ ಶಾಸ್ತ್ರೀಯ ಸೌಂದರ್ಯಸ್ಥಾನಗಳು ಅರ್ಥವಾದ ರೇನೆ ಹಾಡುಗಾರಿಕೆಯಲ್ಲಿ ಮೆಚ್ಚುಗೆ ಬೆಳೆಯುತ್ತದೆ ಎಂದು ಹೇಳುತ್ತಾರೆ. ಈಗ ಚದುರಂಗದಾಟದ ಸ್ಪರ್ಧೆ ನಡೆದಾಗ ಅದನ್ನು ಅಪ್ರಿಸಿಯೇಟ್ ಮಾಡಬೇಕಾದರೆ ತಮಗೆ ಚದುರಂಗದಾಟದ ರೀತಿ ನೀತಿಗಳ ಶಾಸ್ತ್ರೀಯ ಜ್ಞಾನ ಬೇಕಾಗುತ್ತದೆ.

ಆದರೆ ಒಬ್ಬ ಕ್ರಿಕೆಟ್ ಆಟಗಾರ ಒಂದು ಓವರ್ ಬೌಂಡ್ರಿ ಹೊಡೆದಾಗ ಕ್ರಿಕೆಟ್ ಆಟದ ಶಾಸ್ತ್ರೀಯ ಜ್ಞಾನವಿಲ್ಲದವನಿಗೂ ಚಪ್ಪಾಳೆ ಹಾಕುವಷ್ಟು ತಿಳಿದು ಹುರುಪು ಬರುತ್ತದೆ. ಹಿಂದುಸ್ತಾನೀ ರಾಗದಾರೀ ಸಂಗೀತ ಹೀಗೆ ಕ್ರಿಕೆಟ್ ಆಟದಂತಿರಬೇಕು, ಓವರ್ ಬೌಂಡ್ರಿ ಸಿಕ್ಸರ್‌ಗಳಂತೆ ಕ್ಲಾಸಿಕಲ್ ಕಲಾವಿದನೂ ತಾರಸಪ್ತಕದಲ್ಲಿ ತಾನ ಹೊಡೆಯು ಬೇಕು ಎಂದಾಗ ಎಲ್ಲರಿಗೂ ಅದರ ಮೆಚ್ಚುಗೆ ಆಗುತ್ತದೆ ಎಂದು ಹೇಳುತ್ತಾರೆ.

ಸಂಗೀತ ಕರ್ನಾಟಕ ಪದ್ಧತಿಯದೇ ಇರಲಿ ಹಿಂದುಸ್ತಾನೀ ಪದ್ಧತಿಯದೇ ಇರಲಿ ಜನಮನಾನಂದ ಆಗುವ ಹಾಗೆ ಹಾಡಿದರೆ ಅದು ಸಾಫಲ್ಯವನ್ನು ನೀಡಲೆ ಬೇಕು. ಸಸ್ಯಾದಿಗಳಿಗೂ ಸಂಗೀತ ತಿಳಿಯುತ್ತದೆ. ಬೆಂಗಳೂರು ಕಡೆಯ ಸಸ್ಯಾದಿ ಗಳಿಗೆ ಕರ್ನಾಟಕಿ ಸಂಗೀತವಷ್ಟೇ ತಿಳಿಯಬೇಕು ಅಂತೇನಿಲ್ಲ. ಟಿ. ಚೌಡಯ್ಯನವರು ತಮ್ಮ ಪಿಟೀಲು ಪ್ರಯೋಗವನ್ನು ಬೆಂಗಳೂರು ಸಸ್ಯಗಳ ಮೇಲೆ ಮಾಡಿದರು ಅಷ್ಟೆ, ಧಾರವಾಡ ಅಗ್ರಿಕಲ್ಚರ್ ಕಾಲೇಜ್‌ನ ಫಾರ್ಮಿನಲ್ಲಿ ತಮ್ಮ ಏಳು ತಂತಿಯ ಪಿಟೀಲು ಪ್ರಯೋಗ ಮಾಡಿದ್ದರೆ ಧಾರವಾಡದ ಸಸ್ಯಗಳೂ ತಲೆಹಾಕಿ ಪ್ರತಿಕ್ರಿಯೆ ಕೊಟ್ಟು ಅಂಕುರಿಸಿ ಚಿಗುರಿ ಬೆಳೆಯಬಹುದಾಗಿತ್ತು. 'ಶಿಶುರ್ವೇತ್ತಿ ಪಶುರ್ವೇತ್ತಿ' ಅಂತ ಜೋಗುಳ ಆಡಿದರೆ ಶಿಶುಗಳು ನಿದ್ರೆ ಹೋಗುತ್ತವೆ, ಕೊಳಲು ಬಾರಿಸಿದರೆ ಗೋವು ಗಳು ತಲೆದೂಗುತ್ತವೆ, ಬಿಸ್ಮಿಲ್ಲಾ ಖಾನ್‌ರ ಶಹನೈ ವಾದನಗೆ ನಾಗರ ಹೆಡೆಯಾಡಿಸು ತ್ತದೆ– ಆದರೆ ಮನುಷ್ಯನಿಗೆ ಮಾತ್ರ ಪಾಶ್ಚಾತ್ಯ ಸಂಗೀತ, ಪಾಪ್ ಸಂಗೀತ, ಆರ್. ಡಿ. ಬರ್ಮನ್ ಸಂಗೀತ, ಡಾ. ಮಲ್ಲಿಕಾರ್ಜುನ ಮನ್ಸೂರ್, ಪಂಡಿತ ಭೀಮ ಸೇನ ಜೋಶಿ, ಡಾ. ಗಂಗೂಬಾಯಿ ಹಾನಗಲ್, ಡಾ. ಎಂ. ಎಸ್. ಸುಬ್ಬುಲಕ್ಷ್ಮಿ, ಡಾ. ಬಾಲಮುರಲಿ ಕೃಷ್ಣ ಅಂತ ವಿವಿಧ ಸಂಗೀತ ಪ್ರಕಾರಗಳು ವಿವಿಧ ಕಿವಿಗಳಿಗೆ ರಸಾಯನದ ರುಚಿ ಕೊಡುತ್ತವೆ. ಪಂಚಾಕ್ಷರಿ ಗವಯಿಗಳು ತಮ್ಮ ಹಿಂದುಸ್ತಾನೀ, ಕರ್ನಾಟಕೀ ಎರಡೂ ಪ್ರಕಾರಗಳಿಂದ ಜನಮನಗಳನ್ನು ರಂಜಿಸಿದರು. ಅವರೊಬ್ಬ ನಾದಯೋಗಿ, ಉಭಯ ಗಾನಯೋಗಿ ಆಗಿದ್ದರು.

ಪಂಚಾಕ್ಷರ ಬುವಾ ಅವರ ಜೀವನವೇ ಒಂದು ಕಟುಮಧುರ ಸಂಗೀತವಾಗಿತ್ತು. ಅದರಲ್ಲಿ ಆನಂದ ಭೈರವಿಯೂ ಇತ್ತು, ಜೋಗಿಯಾದ ಕರುಣಾರಸವೂ ಇತ್ತು ೧೯೩೩ರ ಸುಮಾರಿಗೆ ಮುಂಬಯಿ HMV ಗ್ರಾಮೋಫೋನ್ ಕಂಪನಿಯವರು ಬುವಾ ಅವರ ರಾಗದಾರೀ ಸಂಗೀತ ಧ್ವನಿ ಮುದ್ರಿಸುವುದಕ್ಕಾಗಿ ಆಮಂತ್ರಿಸಿದರು. ಬುವಾ ಅವರು ಒಪ್ಪಿಕೊಂಡರು, ಆದರೆ ತಾವು ವಚನಗಳನ್ನ, ತತ್ವ ಪದಗಳನ್ನ ಕನ್ನಡದಲ್ಲಿ ಹಾಡತಕ್ಕವರು. ಅವನ್ನ ಮೊದಲು ಧ್ವನಿ ಮುದ್ರಿಸಿಕೊಳ್ಳಲಿಕ್ಕ ಕಂಪನಿ ಯವರು ಒಪ್ಪಿದರೆ ಮಾತ್ರ ತಾವು ಶಾಸ್ತ್ರೀಯ ಸಂಗೀತ ಧ್ವನಿ ಮುದ್ರಿಸುವುದಾಗಿ ಕರಾರು ಹಾಕಿದಾಗ ಕಂಪನಿಯವರು ಒಪ್ಪಲೇಬೇಕಾಯಿತು. ಗವಾಯಿಗಳ ಕನ್ನಡಾಭಿ ಮಾನಕ್ಕೆ ಇದೊಂದು ನಿದರ್ಶನ. 'ಮೂಡಲಿಲ್ಲವೆ ತಪವ' ಎಂಬ ಪಟದೀಪ ರಾಗದ ಭಕ್ತಿಗೀತ ಜನಪ್ರಿಯವಾಯಿತು. ಇಂದಿಗೂ ಅದನ್ನು ಕಲಾವಿದರು ರೇಡಿಯೊದಲ್ಲಿ

ಬಿತ್ತರಿಸುತ್ತಲೆ ಇದ್ದಾರೆ. ಅವರು ಭೀಮ ಪಲಾಸ ರಾಗದಲ್ಲಿ ಹಾಡಿದ 'ನೀರಜಮೇ ಧೂಮ ಮಚಾಯೆ' ಎಂಬ ಶಾಸ್ತ್ರೀಯ ಬೇಜಿನ ಧ್ವನಿ ಮುದ್ರಿಕೆಯನ್ನು ನಾನು ೬೦ ವರ್ಷಗಳ ಹಿಂದೆ ಕೇಳಿದ್ದೇನೆ. ಅದರ ಸವಿಸ್ಮೃತಿ ಇನ್ನೂ ಮಾಸಿಲ್ಲ.

ಗವಾಯಿಗಳು ನಡೆಸುತ್ತಿದ್ದ ನಾಟಕ ಕಂಪನಿ ಮೊದಲು ಆರಂಭವಾದದ್ದು ರಾಣಿಬೆನ್ನೂರು ಲಿಂಗದಹಳ್ಳಿಯಲ್ಲಿ. ಅದು ಹಾನಗಲ್ ಸ್ವಾಮಿಗಳ ತಾಯಿಯವರ ತವರೂರು. 'ಮಳೀ ಮಲ್ಲೇಶ್ವರ ಸಂಗೀತ ನಾಟಕ ಮಂಡಲಿ' ಅಂತ ಹೆಸರು. ಪಂಚಾಕ್ಷರಿ ಗವಾಯಿಗಳು ತಬಲಾ ವಾದನವನ್ನೂ ಸಾಧನೆಗೈದು ನಾಟಕದಲ್ಲಿ ತಬಲಾ ಬಾರಿಸುವರು. ಸುಬ್ಬರಾಜ ಗವಾಯಿಗಳು ಹಾರ್ಮೋನಿಯಂ. ಸುಬ್ಬರಾಜಗವಾಯಿಗಳೇ ತಯಾರಿಸಿದ ಸಿದ್ಧರಾಮೇಶ್ವರ ನಾಟಕ ಬಹಳ ಜನಮನಾಕರ್ಷಣೀಯವಾಗಿತ್ತು. ೧೯೪೦ರಲ್ಲಿ ನರಗುಂದದಲ್ಲಿ ನಿಂತುಹೋದ ಕಂಪನಿ ಮತ್ತೆ ಅಲ್ಲಿಯ ಫಕೀರಪ್ಪ ಹಸಬಿ ಅವರ ಧನ ಸಹಾಯದಿಂದ ತಲೆಯೆತ್ತಿತು. ನಾಟಕದಲ್ಲಿ ಬಸವರಾಜ ರಾಜಗುರು, ಪಂಚಾಕ್ಷರಿಸ್ವಾಮಿ, ಮತ್ತೀಗಟ್ಟಿ ಮೊದಲಾದವರು ಭಾಗವಹಿಸುತ್ತಿದ್ದರು. ಮುಂದೆ ಕಂಪನಿ ಮತ್ತೆ ತಡವರಿಸಿದಾಗ ಚಿತ್ತರಗಿ ಗಂಗಾಧರಶಾಸ್ತ್ರಿಗಳ ಸಹಾಯದಿಂದ "ಶ್ರೀ ಕುಮಾರ ವಿಜಯ ನಾಟಕ ಸಂಘ" ವೆಂಬ ಹೆಸರುತಾಳಿ ಪುಟ್ಟರಾಜ ಗವಾಯಿಗಳಿಂದ ರಚಿತವಾದ ನಾಟಕಗಳನ್ನಾಡತೊಡಗಿದರು. ಗದಗಿನ ಕ್ಯಾಂಪಿನಲ್ಲಿ 'ಹೇಮರೆಡ್ಡಿ ಮಲ್ಲಮ್ಮ'- ಇದು ನಲವಡಿ ಶ್ರೀಕಂಠಶಾಸ್ತ್ರಿಗಳು ಬರೆದುದಿರಬೇಕು- ೩೭೬ ಪ್ರಯೋಗಗಳು ನಡೆದು ಒಂದು ಲಕ್ಷರೂಪಾಯಿ ಲಾಭ ಕೊಟ್ಟು ಒಂದು ಅಚ್ಚಳಿಯದ ದಾಖಲೆಯನ್ನೇ ಸ್ಥಾಪಿಸಿತು.

ಮಹಾರಾಷ್ಟ್ರದಲ್ಲಿ ಶಿಷ್ಯ ದಿಂಗಬರ ಪಲುಸ್ಕರ ಮಾಡಿದ ಕಾರ್ಯವನ್ನೆ ಪಂಚಾಕ್ಷರಿ ಬುವಾ ಕರ್ನಾಟಕದಲ್ಲಿ ಮಾಡಿದರು. ಬಹುಶಃ ೧೯೪೦ರ ಸುಮಾರಿಗೆ ಹಾನಗಲ್ಲ ಕುಮಾರಸ್ವಾಮಿಗಳು ಲಿಂಗೈಕ್ಯರಾದಾಗ ಪಂಚಾಕ್ಷರಿ ಗವಾಯಿಗಳಿಗೆ ಸಿಡಿಲು ಬಡಿದಂತಾಯಿತು. ಮುಂದೆ ಬಸರೀ ಗಿಡದ ವೀರಪ್ಪನವರ ಉದಾರ ದಾನದಿಂದ ನಿರ್ಮಿತವಾದ ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿಯೆ ನೆಲೆಯಾಗಿ ನಿಂತುಕೊಂಡು ಶಿಷ್ಯರನ್ನು ತರಬೇತುಗೊಳಿಸಿದರು. ಇವರು ಒಂದು ಘರಾಣೆ ಕಟ್ಟದಿದ್ದರೂ ಪಂಚಾಕ್ಷರ ಗವಾಯಿಗಳ ಶಿಷ್ಯ ಬಳಗ ಹಿಂದುಸ್ತಾನೀ ದಾಖಲೆ ಪಟ್ಟಿಯಲ್ಲಿ ಹೆಸರು ನೋಂದಾಯಿಸಿದಂಥವರು, ಸರ್ವಶ್ರೀ ಪುಟ್ಟರಾಜಗವಾಯಿಗಳು, ಶೇಷಾದ್ರಿಗವಾಯಿಗಳು, ಗುರು ಬಸವಾಚಾರ್ಯ ಹಿರೇಮಠ, ಬಸವರಾಜ ರಾಜಗುರು, ಅರ್ಜುನಸಾ ನಾಕೋಡ, ಸಿದ್ಧರಾಮ ಜಂಬಲದಿನ್ನಿ, ಮೃತ್ಯುಂಜಯ ಪುರಾಣಿಕ ವ.ತ ಮೊದಲಾದ ಘಟಾನುಘಟಿಗಳು ಪಂಚಾಕ್ಷರಿ ಬುವಾ ಅವರ ಗುರು ನಿರ್ದೇಶನದಲ್ಲಿಯೆ ಪಳಗಿ ಮುಂದೆ ಬೇರೆ ಬೇರೆ ಘರಾಣೆಗಳ ಗರುಡಿಯಲ್ಲಿ ವಿಶೇಷ ಪರಿಶ್ರಮ, ಪದವಿ ಪಡೆದು ಖ್ಯಾತನಾಮರಾದರು. ಗುರುಬಸವಾಚಾರ್ಯ ಹಿರೇಮಠರಂತೂ ೧೪ ವರ್ಷ ಅಖಂಡ ಅಭ್ಯಾಸವನ್ನು ಗುರು ಪಂಚಾಕ್ಷರ ಗರಡಿಯಲ್ಲಿ ಮಾಡಿದ್ದಾರೆಂದು ಬಸವಾ ಗುರು

ಚಾರ್ಯರ ಖಾಸ ಶಿಷ್ಯ, ಖ್ಯಾತ ಗಾಯಕ ವೆಂಕಟೇಶ ಬುರ್ಲಿ ಹೇಳುತ್ತಾರೆ. ಪಂಚಾಕ್ಷರಿ ಬುವಾ ಅವರಿಂದ ಸಂಗೀತ ಶಿಕ್ಷಣ ಪಡೆದ ಶಿಷ್ಯೆಯರಲ್ಲಿ ಗದುಗಿನ ಮುಲ್ಕಿ ಡಾಕ್ಟರರ ಮಗಳು ಸೀತಾಮುಲ್ಕಿ. ಇವರೂ ಮುಂದೆ ಮುಂಬಯಿಗೆ ಹೋಗಿ ಪುಣೆಯಲ್ಲಿ ಹೀರಾಬಾಯಿ ಬಡೋದೆಕರ ಅವರ ಮಾರ್ಗದರ್ಶನದಲ್ಲಿ ತಮ್ಮ ಶಿಕ್ಷಣವನ್ನು ಮುಂದುವರಿಸಿದರು. ಪಂಚಾಕ್ಷರಿ ಗವಾಯಿಗಳು ಮುಲ್ಕೀ ಡಾಕ್ಟರ ಮನೆಗೇ ಹೋಗಿ ಅವರ ಮಗಳಿಗೆ ಸಂಗೀತ ಕಲಿಸುತ್ತಿದ್ದರು. ಒಮ್ಮೆ ಸಂಗೀತ ಪಾಠ ನಡೆದಾಗ ಮುಲ್ಕಿ ಡಾಕ್ಟರರು ಅಚಾನಕವಾಗಿ ಬುವಾ ಅವರ ಕಾಲು ಊದಿಕೊಂಡದ್ದನ್ನು ನೋಡಿ ಸ್ವಲ್ಪ ಗಾಬರಿಗೊಂಡು "ಬುವಾ ನಿಮಗೆ ಉದರ ರೋಗದ ಲಕ್ಷಣ ಇದೆ. ಕೂಡಲೆ ಇಂಜಕ್ಷನ್ ತೆಗೆದುಕೊಳ್ಳಬೇಕು" ಎಂದು ಎಷ್ಟು ಆಗ್ರಹ ಪಡಿಸಿದರೂ ಆ ಸ್ವದೇಶಿ ಅಲ್ಲದ ಉಪಚಾರಕ್ಕೆ ಬುವಾ ಅವರು ಒಪ್ಪಲೇ ಇಲ್ಲ. ಮುಂದೆ ಇದೇ ರೋಗ ಉಲ್ಬಣಿಸಿ ಜೂನ್ ೧೧, ೧೯೪೪ರಂದು ಪಂಚಾಕ್ಷರಿ ಗವಾಯಿಗಳು ಇಹ ಲೋಕವನ್ನು ತ್ಯಜಿಸಿದರು. ಈ ಉಭಯಗಾನಯೋಗಿ ಭಾರತೀಯ ಅಖಂಡ ಸಂಗೀತ ಕಲೆಗೆ ತಮ್ಮ ಅವಿಸ್ಮರಣೀಯವಾದ ಕಾಣ್ಕೆಯನ್ನು ನೀಡಿ ಇಂದಿಗೂ ತಮ್ಮ ಶಿಷ್ಯ ಬಳಗದ ಅಶರೀರ- ಸಂಗೀತವಾಣಿಯಾಗಿ ಅಮರರಾಗಿದ್ದಾರೆ.

## ಗುರುಗಳಾಗಿ ಪಂಚಾಕ್ಷರಿ ಗವಾಯಿಗಳು

ಡಾ॥ ಬಿಂದುಮಾಧವ್ ಪಾಠಕ್

ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲೆ ಗುರುವಿನ ಗುರುತ್ವ ಅಪಾರವಾದದ್ದು. ಆರ್ಶ್ಯ ಪರಂಪರೆಯಲ್ಲಿ ಅನುಗ್ರಹ ಮಾತ್ರದಿಂದಲೇ ವಿದ್ಯಾರ್ಥಿಗೆ ಜ್ಞಾನ ಪ್ರದಾನ ಆಗುತ್ತಿತ್ತೆಂಬ ನಂಬಿಕೆ ಇತ್ತು. ಇದರ ಹಿನ್ನೆಲೆಯಲ್ಲಿ ವಿಶ್ವಾಸ ಮತ್ತು ಕಠಿಣ ಪರಿಶ್ರಮ ಪ್ರಭಾವಪೂರ್ಣವಾಗಿ ಕಾರ್ಯಮಾಡುತ್ತಿತ್ತು. ಜ್ಞಾನ ಎಂಬ ನಂದದ ದೀಪವನ್ನು ಕೊಂಡೊಯ್ಯುವ ಪ್ರಕೃತಿಯಲ್ಲಿ ಗುರುವು ಕೇಂದ್ರ ಸ್ಥಾನದಲ್ಲಿದ್ದ ಗುರುವಿನ ಪ್ರಮುಖ ಕಾರ್ಯ—

"ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜಲ ಶಲಾಕಯಾ" ಅಜ್ಞಾನ ಎಂಬ ಕತ್ತಲೆಯಿಂದ ಸುಜ್ಞಾನ ಎಂಬ ಬೆಳಕಿನತ್ತ ಕೊಂಡೊಯ್ಯುವ ಗುರುವಿನವಿ ಶಿಷ್ಟ ಸ್ಥಾನದ ಅರಿವು ಮೇಲಿನ ಉಕ್ತಿಯಿಂದ ಸ್ಪಷ್ಟವಾಗುತ್ತದೆ. ಅಲ್ಲದೆ,

"ತಮಸೋಮಾ ಜ್ಯೋತಿರ್ಗಮಯಾ" ಎಂಬಲ್ಲಿಯೂ ಇದೇ ತಥ್ಯ ಬೆಳಕಿಗೆ ಬರುತ್ತದೆ. ಕಾಲ ಬದಲಾಯಿತು, ಸಾಮಾಜಿಕ ಪರಿವರ್ತನೆಯ ಜೊತೆಗೆ ಶಿಕ್ಷಣ ಪ್ರಕ್ರಿಯೆಯಲ್ಲೂ ಬದಲಾವಣೆ ಅನಿವಾರ್ಯವಾಯಿತು. ಆದರೂ ಸಹ ಕೆಲವು ವಿಶಿಷ್ಟ ಜ್ಞಾನ ಪ್ರಾಪ್ತಿಯ ಸಂದರ್ಭದಲ್ಲಿ ಗುರವಿನ ಅನುಗ್ರಹದ ವಿನಃ ವಿದ್ಯೆ ಅಪೂರ್ಣವಾಗಿಯೇ ಉಳಿಯುವುದು ಎಂಬುವದಕ್ಕೆ ಸಂಗೀತ ಕ್ಷೇತ್ರವೇ ಪ್ರಮುಖ ನಿದರ್ಶನ. ಇಲ್ಲಿ ಗುರುವಿನ ಅನುಗ್ರಹ ಎಂದರೆ ಕೇವಲ ಕೃಪೆ ಮಾತ್ರವೇ ಅಲ್ಲ ಬದಲಾಗಿ ಗುರುವಿನ ಪ್ರೀತಿ, ದಯೆ, ಕರುಣೆ, ನಿಷ್ಠುರತೆಯೇ ಮೊದಲಾದ ಗುರುತ್ವದ ಗುಣದಿಂದ ಶಿಕ್ಷಣ ಗುರುವಾಗಬಲ್ಲ.

ಇಂತಹ ವ್ಯಷ್ಟಿ–ಸಮಷ್ಟಿಯ ಗುಣವನ್ನು ತಮ್ಮ ವ್ಯಕ್ತಿತ್ವದಲ್ಲಿ ಅರಗಿಸಿಕೊಂಡು ಸಮಾಜ ಸೇವೆಯೆ ಪ್ರಮುಖ ಉದ್ದೇಶವಾಗಿರಿಸಿಕೊಂಡು ಶಿಷ್ಯ ಪ್ರೇಮವನ್ನು ಸಾಕಾರಗೊಳಿಸಿದ ಕರುಣಾಮೂರ್ತಿ ಶ್ರೀ ಪಂಚಾಕ್ಷರಿ ಗವಾಯಿಗಳು ಇವರು ತಮ್ಮ ಗುರುವಿನಿಂದ ಪಡೆದ ಉಪದೇಶ ಮೊತ್ತವನ್ನು ತಮ್ಮ ಶಿಷ್ಯರಿಗೆ ನೀಡುವಾಗ ಜಾತಿ, ಮತವನ್ನು ಎಣಿಸದೆ ಎಲ್ಲ ಅಂಧ, ಅನಾಥ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದ್ದರು. ಇವರಲ್ಲಿ ವೀರಶೈವ, ಬ್ರಾಹ್ಮಣ, ಮುಸಲ್ಮಾನ ಹೀಗೆ ಅನೇಕ ಜಾತಿಯ ಜನರು

ವಿದ್ಯೆ ಕಲಿತಿದ್ದಾರೆ. ತಮ್ಮ ಶಿಷ್ಯರು. ತಮಗಿಂತಲೂ ಹೆಚ್ಚು ಬೆಳಕಿಗೆ ಬರಬೇಕೆನ್ನು ವದು ಗವಾಯಿಗಳ ಸತ್ಯ ಸಂಕಲ್ಪವಾಗಿತ್ತು.

ಶ್ರೀ ಪಂಚಾಕ್ಷರಿ ಗವಾಯಿಗಳ ಮನಸ್ಸಿನಲ್ಲಿ ಹಣ ಮಾಡುವದೇ ಉದ್ದೇಶವಾಗಿ ದ್ದಿದ್ದರೆ. ಅದೆಷ್ಟೋ ಹಣಗಳಿಸಬಹುದಿತ್ತು. ಆದರೆ ಅವರು ಉಚಿತವಾಗಿ ಅನ್ನ ವಸ್ತ್ರ, ವಸತಿ, ಕೊಟ್ಟು ವಿದ್ಯಾದಾನ ಮಾಡಿದರು. ಅವರ ಶಿಕ್ಷಣ ಪದ್ಧತಿಯಂತೂ ಸರಳ ಮತ್ತು ಶಾಸ್ತ್ರೀಯವಾಗಿತ್ತು. ಸ್ವರಸಾಧನೆಗೆ ಅವರು ಅತ್ಯಂತ ಮಹತ್ವ ನೀಡಿದ್ದರು. ಸಂಗೀತಕ್ಕೆ ಸ್ವರದ ಅಭ್ಯಾಸವೇ ನಾಂದಿ ಎಂದು ಹೇಳಿ 'ಆ' ಕಾರದಿಂದ ಪ್ರಾರಂಭಿಸುತ್ತಿದ್ದರು. ಒಂದು ವೇಳೆ ಅದು ವಿದ್ಯಾರ್ಥಿಗೆ ಕಠಿಣವೆನಿಸಿದರೆ 'ಸ, ರಿ, ಗ, ಮ' ದಿಂದ ಪಾಠ ಪ್ರಾರಂಭಿಸುತ್ತಿದ್ದರು. ತಮ್ಮ ವಿದ್ಯಾರ್ಥಿಗಳನ್ನು ಸುತ್ತಲೂ ಕೂಡಿಸಿಕೊಂಡು ಹಾರ್ಮೋನಿಯಂ ನುಡಿಸಿದಂತೆ ವಿದ್ಯಾರ್ಥಿಗಳು ಹಾಡನ್ನು ಹಾಡು ತ್ತಿದ್ದರು. ನಡುನಡುವೆ ಪ್ರಶ್ನೆ ಕೇಳಿ ತಾವು ಹೇಳಿದ್ದು ವಿದ್ಯಾರ್ಥಿಗಳು ಮನನ ಮಾಡಿಕೊಂಡಿದ್ದಾರೆಯೋ ಇಲ್ಲವೋ ಎಂದು ಪರೀಕ್ಷಿಸಿ ನಿರಾಯಾಸವಾಗಿ ಮನದಟ್ಟಾ ಗುವಂತೆ ಕಲಿಸುತ್ತಿದ್ದರು.

ಗಾಯನವಲ್ಲದೇ, ತಬಲಾ, ಹಾರ್ಮೋನಿಯಂ, ಪಖವಾಜ್, ಪಿಟೀಲ್ ಸಾರಂಗಿ. ದಿಲ್‌ರುಬಾ, ಕೊಳಲು ವಾದನವನ್ನು ಕಲಿಸುತ್ತಿದ್ದರು. ವಿದ್ಯಾರ್ಥಿಗಳಿಗೆ ಪಾಠ ಹೇಳುವ ಶ್ರಮವೂ ವಿಶಿಷ್ಟವಾದುದ್ದೇ ಆಗಿತ್ತು. ಬೆಳಿಗ್ಗೆ 4 ರಿಂದ 7 ಮತ್ತೆ, ಸಾಯಂಕಾಲ 4 ರಿಂದ 7 ಗಂಟೆಯವರೆಗೆ ಪಾಠವನ್ನು ಹೇಳುತ್ತಿದ್ದರು. ಗವಾಯಿ ಗಳಿಗೆ ಶಿಷ್ಯರೇ ಸಂಪತ್ತಾಗಿದ್ದರು. ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ಅವರು ವಿದ್ಯಾರ್ಥಿಗಳನ್ನು ನೋಡಿಕೊಳ್ಳುತ್ತಿದ್ದರು. ಸಂಗೀತ ಕಲಿಯುವವರಿಗಂತೂ ಅವರು ದೇವರೇ ಆಗಿದ್ದರು. ಸಂಗೀತದಲ್ಲಿ ಅಪಾರ ಪಾಂಡಿತ್ಯ ಪಡೆದಿದ್ದರೂ ಒಂದಿನಿತು ಗರ್ವ ಅವರಲ್ಲಿರಲಿಲ್ಲ.

ಯಥಾರ್ಥ ದೃಷ್ಟಿಯಿಂದ ಗವಾಯಿಗಳ ಶಿಕ್ಷಕ ಜೀವನವನ್ನು ಅವಲೋಕಿಸಿದಾಗ ಇಂದಿನ ಯಾವ ಗುರುವೂ ನೀಡದಂತಹ ವಿಶಿಷ್ಟ ಜ್ಞಾನವನ್ನು ಅಂದೆಯೇ ತಮ್ಮ ಶಿಷ್ಯಕೋಟಿಗೆ ನೀಡಿದ ಜ್ಞಾನ. ಅಗಣಿತವಾದದ್ದು. ಅಲ್ಲದೇ ತಿಳಿದ ವಿಷಯದಿಂದ ತಿಳಿಯದ ವಿಷಯದೆಡೆಗೆ ಸಾಗುವ ಗವಾಯಿಗಳ ಶಿಕ್ಷಣ ಪದ್ಧತಿ ಅನುಕರಣೀಯ. ಶಿಷ್ಯರ ಬಗೆಗೆ ಇರುವ ನಿಶ್ಚಲ ಪ್ರೇಮ ಗವಾಯಿಗಳ ಗುರುತ್ವದ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸುವದಲ್ಲದೇ ಶಿಷ್ಯರಿಂದ ಗೌರವವನ್ನು ಪಡೆಯುವ ಪ್ರಭಾವಶಾಲಿ ಮಾರ್ಗವು ಆಗಿತ್ತು.

ಕೆಲವೊಂದು ದೃಷ್ಟಿಯಿಂದ ವಿಚಾರ ಮಾಡಿದರೆ ಶ್ರೀ ಪಂಚಾಕ್ಷರಿ ಗವಾಯಿಗಳ ಜ್ಞಾನ-ಧ್ಯಾನದ ಪ್ರಕ್ರಿಯೆಯಲ್ಲಿ ಗುರುವಿನದೋ ಮಹತ್ವದ ಸ್ಥಾನ ಎಂಬುದು ದೃಕ್‌ಗೋಚರವಾಗುತ್ತದೆ. ಈ ಕೊಂಡುಕೊಳ್ಳುವಿಕೆಯು ವ್ಯಾವಹಾರದಲ್ಲಿ ವ್ಯವ

ಹಾರಿಕ ದೃಷ್ಟಿಯಿಂದ ವಿಚಾರ ಮಾಡಿದರೆ ಗವಾಯಿಗಳು ಪಡೆದದ್ದು ಶಿಷ್ಯ ಸಂಪತ್ತನ್ನು ಬಿಟ್ಟು ಉಳಿದೆಲ್ಲವೂ ಕಡಿಮೆಯೆ.

ಪ್ರತಿಫಲವ ಅಪೇಕ್ಷೆ ಇಲ್ಲದೆಯೆ ಕೇವಲ ಗುರುವಿನ ಮಾತನ್ನು ತನ್ನ ನೆಮ್ಮದಿಯ ಹಿನ್ನೆಲೆಯಲ್ಲಿ ಸಾರ್ಥಕಗೊಳಿಸುವ ಉದ್ದೇಶ ಹೊಂದಿದ್ದರಿಂದಲೇ ಯಾವ ಸ್ವಾರ್ಥಕ್ಕೂ ಒಳಗಾಗದೇ ವಿಶೇಷತಃ ಆರ್ಥಿಕ ಹಿನ್ನೆಲೆಯಲ್ಲಿ ಗಳಿಸುವ ಮನೋಭಾವ ವನ್ನು ಹೊಂದದವರಾಗಿದ್ದರು. ಪಂಚಾಕ್ಷರಿ ಗವಾಯಿಗಳು ಇಲ್ಲಿ ಜೀವನಕ್ಕಾಗಿ ಕಲೆಯ ಬದಲಾಗಿ ಕಲೆಗಾಗಿ ಜೀವನ ಎಂಬ ಮಾತು ಗವಾಯಿಗಳ ಇಂತಹ ಕ್ರಿಯೆಯಿಂದ ಸ್ಪಷ್ಟವಾಗುತ್ತದೆ. ಅವರ ಬಾಲ್ಯದಿಂದ ಪ್ರಾರಂಭಿಸಿ ಅಂ ಮ ದಿನಗಳವರೆಗೆ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿದಾಗಲೂ ಯಾವುದೇ ರೀತಿಯ ವಿಶೇಷ ವ್ಯತ್ಯಾಸ ಕಾಣ ಸಿಗದು. ಇದೇ ಅವರ ನಿಸ್ವಾರ್ಥ ಸಾಮಾಜಿಕ ಸೇವಾ ಮನೋಭಾವದ ದ್ಯೋತಕ.

ಗವಾಯಿಗಳ ಶಿಷ್ಯವಾತ್ಸಲ್ಯದ ಮುಖ್ಯ ಕಾರಣಗಳಿಂದಾಗಿ ದೇಶದಾದ್ಯಂತ ಶಿಷ್ಯ ಸಂಪತ್ತನ್ನು ಪಡೆದು ಸಂಗೀತ ಕಲೆಯನ್ನು ಪ್ರಸಾರ ಮಾಡಲು ಕಾರಣೀಭೂತ ರಾದರು. ವಿದ್ಯಾರ್ಥಿಗಳ ಯಶಸ್ಸಿನ ಹಿನ್ನೆಲೆಯಲ್ಲಿ ಸಾರ್ಥಕತೆಯನ್ನು ಪಡೆದ ಗವಾಯಿಗಳು ಉತ್ತಮ ಗುರುವಾಗಿ ಸಮಾಜಕ್ಕೆ ಅನೇಕ ಪ್ರಭಾವಶಾಲಿ ಶಿಷ್ಯ ರನ್ನು ಕೊಟ್ಟಿದ್ದಾರೆ.

ಪಂಚಾಕ್ಷರಿ ಗವಾಯಿಗಳ ವಿಶೇಷತೆ ಕೇವಲ ಪಾಠ ಮಾಡುವುದರಲ್ಲಿ ಮಾತ್ರ ಆಗಿರದೆ ಪಾಠ ಮಾಡಲು ಬೇಕಾದ ಶಾಲೆಯ ಸ್ಥಾಪನೆಯು ಕುಮಾರ ಸ್ವಾಮಿಗಳ ಕೃಪಾಶೀರ್ವಾದಗಳಿಂದ ಸಂಗೀತ ಶಾಲೆಯ ಸ್ಥಾಪನೆಯಾಯಿತು.

ಶಾಲೆಯ ಜವಾಬ್ದಾರಿಗಳನ್ನೆಲ್ಲಾ ಗವಾಯಿಗಳೇ ನೋಡಿಕೊಳ್ಳುತ್ತಿದ್ದರು. ನಡುವೆ ಶ್ರೀ ಕುಮಾರಸ್ವಾಮಿಗಳವರು ಈ ಶಾಲೆಯನ್ನು ಸಂಚಾರಿ ಶಾಲೆಯನ್ನಾಗಿ ಪರಿವರ್ತಿಸಬೇಕೆಂದು ಯೋಚಿಸಿದರು. ಹೀಗೆ ಮಾಡುವದರಿಂದ ನಾಡಿನ ನಾನಾ ಭಾಗಗಳಲ್ಲಿ ಜನಗಳಿಗೆ ಸಂಗೀತ ಪರಿಚಯವಾಗುತ್ತದಲ್ಲದೇ, ಗವಾಯಿಗಳ ಪರಿ ಚಯವೂ ಆಗುತ್ತದೆಂದು ಶಿವಯೋಗಿಗಳು ಭಾವಿಸಿದರು. ಅದೇ ರೀತಿಯಾಗಿ ಸಂಗೀತ ಶಾಲೆಯು ಸಂಚಾರಿ ಸಂಗೀತ ಶಾಲೆಯಾಗಿ ಪರಿವರ್ತನೆಗೊಂಡಿತು. ಇದಕ್ಕೆ 'ಕುಮಾರೇಶ್ವರ ಕೃಪಾಪೋಷಿತ ಧರ್ಮಾರ್ಥ ಸಂಚಾರಕ ಸಂಗೀತ ಮಹಾವಿದ್ಯಾಲಯ' ಎಂದು ಹೆಸರನ್ನಿಡಲಾಯಿತು. ಆದರೆ ಗವಾಯಿಗಳು ಈ ಸಂಚಾರಿ ಸಂಗೀತ ಶಾಲೆ ಯಿಂದ ಸಂಗೀತದ ಆರಂಭದ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಾರದೆಂದು ಭಾವಿಸಿ ಶಾಲೆಯನ್ನು ಎರಡು ಭಾಗಗಳಾಗಿ ವಿಂಗಡಿಸಿ, ಸ್ಥಾಯಿಕ ಸಂಗೀತ ಶಾಲೆಯೆಂದೂ, ಸಂಚಾರಿ ಸಂಗೀತ ಶಾಲೆಯೆಂದೂ ಹೆಸರಿಟ್ಟರು. ಪ್ರಾರಂಭಿಕ ವಿದ್ಯಾರ್ಥಿಗಳನ್ನು ಸ್ಥಾಯಿಕ ಶಾಲೆಯಲ್ಲೂ, ಪ್ರೌಢ ವಿದ್ಯಾರ್ಥಿಗಳಿಗೆ ಸಂಚಾರಿ ಶಾಲೆಯಲ್ಲೂ ವಿದ್ಯಾ ಭ್ಯಾಸವನ್ನು ಕಲಿಸಿ ವಿದ್ಯಾರ್ಥಿಗಳಿಗೆ ಸ್ವಲ್ಪವೂ ಕಷ್ಟವಾಗದ ರೀತಿಯಲ್ಲಿ ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಿ ಆಸಕ್ತಿಯಿಂದ ಕಲಿಯಲು ಅನುವು ಮಾಡಿಕೊಟ್ಟರು.

ಒಂದು ಸಲ ಶ್ರೀ ಪಂಚಾಕ್ಷರಿ ಗವಾಯಿಗಳವರು ತಮ್ಮ ಶಿಷ್ಯ ವೃಂದದ ಜೊತೆಗೆ ಬಾಗಲಕೋಟೆಯಲ್ಲಿ ವಾಸ್ತವ್ಯ ಮಾಡಿದ್ದಾಗ, ಹಣದ ಕೊರತೆಯಿಂದ ಎಲ್ಲ ವಿದ್ಯಾರ್ಥಿಗಳಿಗೆ ಹಾಲು ಕೊಡುವ ವ್ಯವಸ್ಥೆ ಆಗುವುದಿಲ್ಲ ಎಂದು ವ್ಯವಸ್ಥಾಪಕರಾದ ಶ್ರೀ ಗಂಗಾಧರ ಶಾಸ್ತ್ರಿಗಳು ಹೇಳಿದಾಗ– 'ಮಕ್ಕಳಿಗೆ ಹಾಲು ಕೊಡದೇ ತಾನೂ ಹಾಲು ಕುಡಿಯುವುದಿಲ್ಲ' ಎಂದು ಹೇಳಿದರು. ಆದರೆ ಗವಾಯಿಗಳಿಗೆ ತಮ್ಮ ಶಿಷ್ಯರ ಮೇಲೆ ಇದ್ದ ಮಮತೆ ಪ್ರೀತಿ ಈ ಸಂದರ್ಭದಲ್ಲಿ ವ್ಯಕ್ತವಾಗುತ್ತದೆ.

ಅಷ್ಟೇ ಅಲ್ಲದೆ ಕೆಲವೊಮ್ಮೆ ಅವರು ತಮ್ಮ ಶಿಷ್ಯರ ಕಡೆಯಿಂದಲೂ ಸಹ ಸಂಗೀತದ ಪಾಠಗಳನ್ನು ಕಲಿಯಲು ಹಿಂಜರಿಯಲಿಲ್ಲ. ಅದಕ್ಕೆ ಒಂದು ನಿದರ್ಶನವೆಂದರೆ ಗವಾಯಿಗಳು ನೀಲಕಂಠ ಬುವಾರವರ ಹತ್ತಿರ ಸಂಗೀತ ಅಭ್ಯಾಸಿಸುತ್ತಿರುವಾಗ ನೀಲಕಂಠ ಬುವಾರವರು ದಿನಕ್ಕೆ ಕೇವಲ ಒಂದು ಅಥವಾ ಎರಡು ಚೀಜ್‌ಗಳನ್ನು ಕಲಿಸುತ್ತಿದ್ದರು. ಆದರೆ ಗವಾಯಿಗಳವರಿಗೆ ಬಹಳಷ್ಟು ಚೀಜ್‌ಗಳನ್ನು ಕಲಿಯಬೇಕೆನ್ನುವ ಆಸೆ ಇದ್ದುದರಿಂದ ತಮ್ಮ ಶಿಷ್ಯರೊಬ್ಬರಲ್ಲಾದ ಬಸವರಾಜ ರಾಜಗುರು ಅವರಿಗೆ "ನೀಲಕಂಠ ಬುವಾರವರ ಸೇವೆ ಮಾಡಿ ಅವರ ಮನವೊಲಿಸಿ ಅವರ ಕಡೆಯಿಂದ ಅನೇಕ ಚೀಜ್‌ಗಳನ್ನು ಪಡೆದುಕೋ" ಆಮೇಲೆ ನನಗೆ ಕಲಿಸು ಎಂದು ಅಪ್ಪಣೆ ಮಾಡಿದ್ದರು. ಈ ರೀತಿ ಅನೇಕ ಚೀಜ್‌ಗಳ ಸಂಗ್ರಹ ಅವರು ಮಾಡಿದ್ದರು. ಅಂದರೆ ಶಿಷ್ಯರನ್ನು ಗುರುವಾಗಿ ಮಾಡಿಕೊಂಡ ಅವರ ವಿಶಾಲ ಮನೋಭಾವ ಈ ಸಂದರ್ಭದಲ್ಲಿ ವ್ಯಕ್ತವಾಗುತ್ತದೆ.

ಈ ರೀತಿ ಪಂ : ಪಂಚಾಕ್ಷರಿ ಗವಾಯಿಗಳು ಕೇವಲ ಗುರುವಾಗಿ ಬಾಳಲಿಲ್ಲ. ಅಂಧ ಮತ್ತು ಅನಾಥ ಮಕ್ಕಳಿಗೆ (ವಿದ್ಯಾರ್ಥಿಗಳಿಗೆ) ತಂದೆ-ತಾಯಿಯ ವಾತ್ಸಲ್ಯವನ್ನು ತೋರಿಸುತ್ತಿದ್ದರು.

# ಸಮಾಜ ಮತ್ತು ಪಂಚಾಕ್ಷರಿ ಗವಾಯಿಗಳು

ಶ್ರೀ ಶ್ರೀಪಾದ ವಿ. ಹೆಗಡೆ

ಕಲಾ ಜಿಜ್ಞಾಸುಗಳಲ್ಲಿ ಪ್ರಾಚೀನ ಕಾಲದಿಂದಲೂ "ಜೀವನಕ್ಕಾಗಿ ಕಲೆಯೋ ?" "ಕಲೆಗಾಗಿ ಜೀವನವೇ ." ಅಥವಾ "ಕಲೆಗಾಗಿ ಕಲೆಯೋ ?" ಎಂಬ ಮೂಲಭೂತ ಸಮಸ್ಯೆ ಇದ್ದೇ ಇದೆ. ಪ್ರಸ್ತುತ ಗಾನಯೋಗಿ ಪಂಚಾಕ್ಷರಿ ಗವಾಯಿಗಳ ಕಲಾ ಜೀವನದ ಪರಿವೇಶದಲ್ಲಿ ಎಷ್ಟರಮಟ್ಟಿಗೆ ಸಮಾಜ ಅವರನ್ನು ತೊಡಗಿಸಿಕೊಂಡಿದೆ, ಎಷ್ಟರಮಟ್ಟಿಗೆ ಪಂಚಾಕ್ಷರಿ ಗವಾಯಿಗಳ ಪ್ರತಿಭೆ ಸೃಜನಾತ್ಮಕತೆ ಪ್ರಭಾವ ಬೀರಿದೆ ಎಂಬುದರ ಕುರಿತು ಅವಲೋಕಿಸುವದೇ ಪ್ರಮುಖವಾದದ್ದು ಎಂದೆನಿಸುತ್ತದೆ

ಪಂಚಾಕ್ಷರಿ ಗವಾಯಿಗಳ ವ್ಯಕ್ತಿತ್ವದ ಮೇಲೆ ಆನುವಂಶೀಯ ಪ್ರಭಾವ ಎಷ್ಟಿದೆಯೋ ಅದಕ್ಕೂ ಮಿಗಿಲಾಗಿ ಪರಿಸರದ ಪ್ರಭಾವ ಅವರ ಬಾಲ್ಯ ಜೀವನದಿಂದ ಮೊದಲುಗೊಂಡು ಪ್ರಬುದ್ಧ ಜೀವನದವರೆಗೂ ಕಾಣಬಹುದಾಗಿದೆ.

ಪಂಚಾಕ್ಷರಿ ಗವಾಯಿಗಳ ಜೀವನವನ್ನು ಆಳವಾಗಿ ಅಧ್ಯಯನ ಮಾಡಿದಾಗ ಸಮಾಜಕ್ಕೆ ಇವರು ಯಾವ ಮಹಾನ್ ವ್ಯಕ್ತಿಯು ನೀಡದಂತಹ ಸತ್ಯ ಸುದ್ಧವಾದ ಕಾಯಕ ವೃತ್ತಿಯನ್ನು, ಸಂಯಮ ಶಕ್ತಿಯನ್ನು, ಸದ್ಗುರು ಭಕ್ತಿಯನ್ನು ಇವು ಅಲ್ಲದೆ ವ್ಯವಹಾರಿಕ ಸಜ್ಜನಿಕೆ, ತತ್ವನಿಷ್ಠೆ ಕ್ರೀಯಾಶೀಲತೆ, ಸಮಾಜ ಸೇವಾ ದೃಷ್ಠಿ, ತ್ಯಾಗ ಮನೋಭಾವನೆಯೇ ಮೊದಲಾದ ವಿಶಿಷ್ಟ ಗುಣಗಳನ್ನು ಸಮಾಜಕ್ಕೆ ನೀಡಿದ್ದು ಯತಾರ್ಥ ಸತ್ಯವಾದರೂ ಅವರ ಜೀವಿತ ಕಾಲದ ಸಾಮಾಜಿಕ, ಆರ್ಥಿಕ, ರಾಜ ನೈತಿಕ, ಧಾರ್ಮಿಕ, ಭಾವನಾತ್ಮಕ ಮತ್ತು ನೈತಿಕ ಕ್ಷೇತ್ರಗಳ ಶಿಷ್ಟ ಸಂದರ್ಭಗಳನ್ನು ಅವಲೋಕಿಸಿದಾಗ ಸಮಾಜ ಇವರಿಗೆ ನೀಡಿದ ಪ್ರತಿಫಲದ ಪ್ರಮಾಣ ಎಷ್ಟೆಂಬುದು, ಸಾಮಾನ್ಯ ಜಿಜ್ಞಾಸುಗಳಿಗೂ ಅರ್ಥವಾಗುತ್ತದೆ. ಪಂಚಾಕ್ಷರಿ ಗವಾಯಿಗಳ ಮೂಲಕ ಸಾಕಷ್ಟು ಕೊಟ್ಟ ದೇವ ಏನನ್ನೂ ಪಡೆಯದೇ ಎಲ್ಲವನ್ನು ಸಮಾಜಕ್ಕೆ ನೀಡಿದ.

"ರೆಕ್ಕೆ ಬಲಿತಹ ಮರಿಯು ತಾಯ್ವಕ್ಕಿ ಹಕ್ಕಿಯಿಂ ಕೆಳಗೆಸೆದು ಹಾರುವದ ಕಲಿಸು ವಂತೆ" ಶ್ರೀ ಕುಮಾರಸ್ವಾಮಿಗಳು ಒಂದು ದಿನ ಗವಾಯಿಗಳವರಿಗೆ ಸ್ವತಂತ್ರ ಜೀವಿ ಯಾಗಿ ಬಾಳುವಂತೆ ಅಪ್ಪಣೆ ಕೊಟ್ಟರು. ಗುರುವಿನ ಬೆಚ್ಚನೆಯ ಆಶ್ರಯದಲ್ಲಿದ್ದ ಗವಾಯಿಗಳಿಗೆ ಸಿಡಿಲು ಬಡಿದಂತಾಯಿತು. ಆದರೂ ಎದೆಗುಂದದೆ ಗುರುವಿನ ಅಣತಿ ಯಂತೆ ನಡೆದರು.

ಗವಾಯಿಗಳಲ್ಲಿ ಸಮಾಜ ಸೇವಾ ದೃಷ್ಟಿಯ ಬೀಜಾರೋಪಣ ಅವರ ಗುರುಗಳಾದ ಕುಮಾರ ಮಹಾಸ್ವಾಮಿಗಳಿಂದ—"ನೀನು ಬೇರೆ ಹೋಗಿ ಸ್ವತಂತ್ರ ಜೀವಿಯಾಗಬೇಕು, ಸಮಾಜ ಸೇವೆಯಲ್ಲಿ ತೊಡಗಬೇಕು. ಆಚಾರ ವಿಚಾರಗಳನ್ನು ಬಿಡಬಾರದು, ಮೇಲುಕೀಳೆಂಬ ಭಾವನೆಯನ್ನು ತಳೆಯದೆ ಸಮಸ್ತ ಜಾತಿಯ ಅಂಧ, ಅನಾಥ ಮಕ್ಕಳಿಗೆ ನಿರ್ವಂಚನೆಯಿಂದ ಪಾಠ ಹೇಳಿಕೊಡಬೇಕು. ಎಲ್ಲಿಯಾದರು ಇರು, ಹೇಗಾದರೂ ಇರು, ನೀನು ಮಾತ್ರ ಸಮಾಜದ ಮಗನೇ ಆಗಿರು, ಚಿಂತಿಸಬೇಡ. ದೇವರ ಮೇಲೆ ಭಾರಹಾಕಿ ಸೇವಾ ಕ್ಷೇತ್ರಕ್ಕೆ ಇಳಿ" ಇದೇ ಸ್ಫೂರ್ತಿಯನ್ನು ಧಾರಣೆ ಮಾಡಿಕೊಂಡು ಅಂಧ, ಅನಾಥ ಮಕ್ಕಳನ್ನೇ ಮುಖ್ಯ ಶಿಷ್ಯರನ್ನಾಗಿ ಮಾಡಿಕೊಂಡು ತಮ್ಮ ಉಭಯ ಕಲೆಯನ್ನು ಶಿಷ್ಯ ವೃಂದಕ್ಕೆ ಧಾರೆಯೆರೆದರು, ಸಂಗೀತ ಪ್ರೇಮಿಗಳಿಗೆ ರಸದ ಔತಣವನ್ನು ಉಣಬಡಿಸಿದರು.

ಹೊರನೋಟಕ್ಕೆ ಅಂಧರಾಗಿದ್ದ ಗವಾಯಿಗಳು ತಮ್ಮ ಪಂಚಪ್ರಾಣಗಳಂತಿದ್ದ ಅಂಧ ಮಕ್ಕಳನ್ನು ಕಟ್ಟಿಕೊಂಡು ಊರು ಊರು ಅಲೆಯತೊಡಗಿದರು. ಮಠ-ಮಂದಿರಗಳಲ್ಲಿ ಬಿಡಾರ ಹೂಡುತ್ತಿದ್ದರು. ಕಂತೆ ಭಿಕ್ಷೆ ಮಾಡಿ ಅನಾಥ ಮಕ್ಕಳ ಪೋಷಣೆ ಮಾಡುತ್ತಿದ್ದರು. ಬೀಡು ಬಿಟ್ಟಲ್ಲಿಯೇ ಸಂಗೀತ ಪಾಠ ಹೇಳುತ್ತಿದ್ದರು. ಹೀಗೆ ಸಂಗೀತ ವಿದ್ಯೆಯು ನಾಡಿನಾದ್ಯಂತ ಪ್ರಸಾರವಾಗತೊಡಗಿತು.

ಸಂಗೀತ ಕಾರ್ಯಕ್ರಮಗಳ ಜೊತೆ ಜೊತೆಯೇ ಕೀರ್ತನ ಕಲೆಯ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಕೀರ್ತನೆಗಳನ್ನು ಮಾಡಿದಾಗ ಸಹೃದಯ ಸಂಪನ್ನರಾದ ಜನ ಕೊಟ್ಟಷ್ಟೇ ಸಂಭಾವನೆಯನ್ನು ಸ್ವೀಕರಿಸಿ ತೃಪ್ತರಾಗುತ್ತಿದ್ದರು. ಕೀರ್ತನೆ, ಹಾಡುಗಾರಿಕೆ, ಪ್ರವಚನ. ಭಜನೆ ಮೊದಲಾದ ಕಲಾ ಪ್ರದರ್ಶನಗಳಿಂದ ಬಂದ ಸಂಪಾದನೆ ಎಲ್ಲವನ್ನು ಸಂಗೀತ ಶಾಲೆಗಾಗಿ ಧಾರೆಯೆರೆದರು.

ಗವಾಯಿಗಳಿಗೆ ವಾಕ್ಸಿದ್ಧಿ ಇತ್ತೆಂಬ ಪ್ರತೀತಿ ಇದೆ. ಇದನ್ನು ಹೇಳುವ ಅದೆಷ್ಟೋ ಘಟನೆಗಳು ಅವರ ಜೀವನದಲ್ಲಿ ನಡೆದಿವೆ.

ಸಂಗೀತ ಪ್ರಚಾರಕ್ಕಾಗಿ, ಸಮಾಜ ಕಲ್ಯಾಣಕ್ಕಾಗಿ ಗವಾಯಿಗಳು ಗದುಗಿನಲ್ಲೊಂದು ಆಶ್ರಮ ಸ್ಥಾಪಿಸಿದರು. ಗವಾಯಿಗಳಿಗೆ ನೆರವು ನೀಡಿದವರೆಲ್ಲೆಲ್ಲಾ ಬಸರಿಗಿಡದ ವೀರಪ್ಪನವರು ಪ್ರಮುಖರು. ಈ ಮಹಾದಾನಿ ಮಹಾನುಭಾವನ ಅವರ್ಣೀಯ ಔದಾರ್ಯವನ್ನು ಕಂಡ ಗವಾಯಿಗಳು ತಮ್ಮ ಆಶ್ರಮಕ್ಕೆ ವಿರೇಶ್ವರ ಪುಣ್ಯಾಶ್ರಮವೆಂದೆ ಹೆಸರಿಟ್ಟಿದ್ದಾರೆ.

ಗವಾಯಿಗಳು ಅದೆಷ್ಟೇ ಸಮಾಜ ಕಲ್ಯಾಣ ಚಟುವಟಿಕೆಗಳಲ್ಲಿ ತೊಡಗಿದ್ದರೂ ಆಧ್ಯಾತ್ಮಿಕ ಸಾಧನೆಯನ್ನು ಬಿಟ್ಟಿರಲಿಲ್ಲ. ಏರು ಜೌವನದಲ್ಲಿ ವಿಷಯ ವಿಕಾರ ಭಾರವನ್ನು ತೂರಿನಿಂತ ಗವಾಯಿಗಳಿಗೆ ಉದರ ರೋಗ ಕಾಣಿಸಿಕೊಂಡಿತು. ದಿನ ದಿನಕ್ಕೆ ತಾನು ಮೃತ್ಯುವಿಗೆ ಹತ್ತಿರವಾಗುತ್ತಿದ್ದೇನೆಂಬ ಸತ್ಯ ಅರಿತ ಗವಾಯಿಗಳು ಲಿಂಗಾರಾಧನೆಯನ್ನು ತೀವ್ರಗೊಳಿಸುತ್ತಿದ್ದರು. ಹೀಗೆ ಲಿಂಗ ಪೂಜೆಯಲ್ಲೇ ನಿರತ

ರಾದಾಗ 1944ನೇ ವರ್ಷದ ಜ್ಯೇಷ್ಠ ಮಾಸದ ಕೃಷ್ಣ ಪಂಚಮಿಯ ದಿನ ಲಿಂಗೈಕ್ಯ ರಾದರು.

ಸಾಮಾಜಿಕ ಕ್ಷೇತ್ರದ ವಿಶಿಷ್ಟ ಸಂದರ್ಭಗಳಲ್ಲಿ ಗವಾಯಿಗಳ ಬಹುಮುಖ ಪ್ರತಿಭೆಯ ಸಾಕಾರ ಸ್ವರೂಪವನ್ನು ಕಾಣಬಹುದು. ಸಂಗೀತದಲ್ಲಿ ಹಿಂದೂಸ್ಥಾನಿ-ಕರ್ನಾಟಕೀ, ಕೀರ್ತನೆ, ನಾಟಕ ಮೊದಲಾದ ಕಲೆಗಳಲ್ಲಿ ತೋರಿಸಿದ ಪಾಂಡಿತ್ಯ ಕಣ್ಣಿಲ್ಲ ದವರಿಗೂ ಕಾಣಸಿಗುವ ಕಲೆಯ ಸುಂದರ ಗೀತ ವಾದ್ಯನೃತ್ಯಗಳ ಸಮ್ಮಿಲನ ಅವರ ಸೃಜನಾತ್ಮಕ ಪ್ರತಿಭೆಗೆ ಸಾಕ್ಷಿ.

ಸಂಗೀತವು ಕಣ್ಣಿಲ್ಲದವರಿಗೂ ಕಾಣಸಿಗುವ ಕಲೆ. ತಾಳ್ಮೆ ಇಲ್ಲದವರಿಗೆ ತಾಳ್ಮೆ ಯನ್ನು ನೆಮ್ಮದಿಯನ್ನು ನೀಡುವ ಕಲೆ. ಇದು ಸಮಸ್ತ ಸಿದ್ಧಿಗೂ ಸಮನ್ವಯ ಶಕ್ತಿ ಯಾಗಿ ಪರಿಣಮಿಸುತ್ತದೆ. ಶಿವಯೋಗ ಸಾನ್ನಿಧ್ಯವನ್ನುಂಟುಮಾಡುತ್ತದೆ. ಮನ ಸ್ಸನ್ನು ನಿರ್ಮಲಗೊಳಿಸುತ್ತದೆ. ಭಾವಸ್ಪಂದನಕ್ಕೆ ಎಡೆ ಮಾಡಿಕೊಡುತ್ತದೆ. ಲೌಕಿಕ ದಲ್ಲಿ ಅಲೌಕಿಕ ಆನಂದವನ್ನು ಅನುಭವಿಸುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ನಾದಾನುಸಂಧಾನ ಆತ್ಮಾನುಸಂಧಾನವಾಗುತ್ತದೆ. ಇಂತಹ ಸಂಗೀತ ಕಲೆಯನ್ನು ಲೋಕಕ್ಕೆ ಕೊಟ್ಟು ಗವಾಯಿಗಳು ಮಹಾತ್ಕಾರ್ಯಗೈದಿದ್ದಾರೆ.

ಪರೋಪಕಾರಾಯ ಫಲಂತಿ ವೃಕ್ಷಾ :
ಪರೋಪಕಾರಾಯ ವಹಂತಿ ನದ್ಯಾ :
ಪರೋಪಕಾರಾಯ ದುಹಂತಿ ಗಾವ :
ಪರೋಪಕಾರಾರ್ಥ ಮಿದಂ ಶರೀರಂ : ಎಂಬಂತೆ ಗವಾಯಿಗಳು ತಮ್ಮ ದೇಹವನ್ನೇ ಪರೋಪಕಾರಕ್ಕಾಗಿ ಮುಡಿಪಿಟ್ಟರು. ಅಷ್ಟೇ ಅಲ್ಲ

ಶ್ರೋತ್ರಂ ಶ್ರುತೇನ್ನೈವ ನ ಕುಂಡಲೀನ
ದಾನೇನ ಪಾಣಿರ್ನತು ಕಂಕಣೇನ
ಶ್ರೀತಂ ಸದಾ ಚಂದನ – ಪಾದಪಸ್ಯ

ಪರೋಪಕಾರಾಯ ಸತಾಂ ವಿಭೂತಯಃ ಎಂಬಂತೆ ಗವಾಯಿಗಳು ತಮ್ಮ ದೇಹವನ್ನೇ ಪರೋಪಕಾರಕ್ಕಾಗಿ ಮುಡಿಪಿಟ್ಟರು. ತನು, ಮನ, ಧನಗಳನ್ನು ಸಂಗೀತಕ್ಕಾಗಿಯೇ ವಿನಿಯೋಗಿಸಿದರು. ತನ್ಮೂಲಕ ಸಮಾಜ ಸೇವೆ ಗೈದರು.

ದೇವಾತ್ಮ ಸಂಭೂತರು ಇದ್ದಾಗ, ತಮ್ಮ ಜೀವತೇದು ಜನೋಪಕಾರಿ ಕೃತ್ಯ ಗಳನ್ನು ಎಸಗುತ್ತಾರೆ, ಹಾಗಂತ ದೇಹ ತ್ಯಜಿಸಿದರೆ ತಮ್ಮದೇ ಆದ ತತ್ವಗಳನ್ನು ಸಮಾಜದಲ್ಲಿ ಬಿಟ್ಟೇ ಹೋಗುತ್ತಾರೆ. ಪಂಚಾಕ್ಷರಿ ಗವಾಯಿಗಳು ಲಿಂಗೈಕ್ಯರಾದರೂ ತಮ್ಮ ನೆಚ್ಚಿನ ಶಿಷ್ಯರಾದ ಪುಟ್ಟರಾಜ ಗವಾಯಿಗಳನ್ನು ತಮ್ಮ ಕಾರ್ಯ ಮುಂದು ವರೆಸುವಂತೆ ಪ್ರೇರೇಪಿಸಿದ್ದಾರೆ. ಇಂದು ಗದಗಿನ "ವೀರೇಶ್ವರ ಪುಣ್ಯಾಶ್ರಮ" ಸಾವಿರಾರು ಸಂಗೀತ ವಿದ್ವಾಂಸರುಗಳನ್ನು ತಯಾರಿಸಿ ಸಮಾಜಕ್ಕೆ ನೀಡುತ್ತಿದೆ.

ಗವಾಯಿಗಳ ಜೀವಿತ ಕಾಲದಲ್ಲಿಯ ಸಾಮಾಜಿಕ ಮತ್ತು ಆರ್ಥಿಕ, ಧಾರ್ಮಿಕ

ಕ್ಷೇತ್ರಗಳ ಪ್ರಭಾವದಿಂದಾಗಿ ಅವರ ವೈಯಕ್ತಿಕ ಕಾಮನೆಗಳೆಲ್ಲಾ ವ್ಯವಹಾರಿಕ ರೂಪಕ್ಕೆ ಭಾರದೇ ಇದ್ದುದು ಗಮನಕ್ಕೆ ಬರುತ್ತದೆ. ಪ್ರಮುಖ ನಿದರ್ಶನವಾಗಿ– ವಿವಾಹ ಎಂಬ ಹಂತವನ್ನು ತಲುಪಿ ಗೃಹಸ್ಥ ಆಶ್ರಮದಲ್ಲಿ ಪ್ರವೃತ್ತಿ ಮಾರ್ಗದಿಂದ ಬಾಳ್ವೆಯನ್ನು ಸಾಗಿಸಬೇಕೆಂಬ ಆಕಾಂಕ್ಷೆ ಉಳ್ಳವರಾದ ಗವಾಯಿಗಳು ತಮ್ಮ ಮದುವೆಯ ಪ್ರಸ್ತಾಪವನ್ನು ಗುರುಗಳ ಬಳಿ ಸಂಕೋಚದಿಂದಲೇ ಆದರೂ ಶಕ್ತಿ ಪೂರ್ಣವಾಗಿ ಪ್ರಸ್ತಾಪಿಸಿದರು. ಆದರೆ, ಗುರುಗಳು ಉದ್ದೇಶದ ಮುಂದೆ ಇವರ ಗುರಿ ದಿಕ್ಕು ತಪ್ಪಿತು. ಗುರುಗಳು ಇವರ ಮನಃಪರಿವರ್ತನೆಯ ಪ್ರಯತ್ನದಲ್ಲಿ ಅಸಫಲತೆಯನ್ನು ಹೊಂದಿದರೂ ಸಾಕಷ್ಟು ಕಡೆ ಇವರ ಮದುವೆಯ ಪ್ರಸ್ತಾಪ ಮಾಡಿದರೂ ಅಂಧತ್ವದ ಕಾರಣದಿಂದಾಗಿ, ಆರ್ಥಿಕ ಸ್ಥಿತಿಯಿಂದಾಗಿ ಸಾಮಾಜಿಕ ಪರಿವೇಶದ ಕಾರಣ ಹೆಣ್ಣು ಕೊಡದೇ ಇದ್ದುದನ್ನು ಪ್ರಸ್ತಾಪಿಸಿ ಅಂದಿನ ಪದ್ಧತಿ ಯಂತೆ ಹೆಣ್ಣಿಗಾಗಿ ಕೊಡುವ ಶುಲ್ಕದ ಬೇಡಿಕೆ ಜಾಸ್ತಿಯಾಗಿತ್ತು. ಸ್ವಾಮಿಗಳು ಬೇಸತ್ತರೂ ಗುಣಕ್ಕೆ ಬೆಲೆ ಕೊಡುವ ಜನರೇ ಹೆಚ್ಚೆಂದು ಭಾವಿಸಿ ಗವಾಯಿಗಳಿಗೆ ಮತ್ತೆ ಮತ್ತೆ ಬ್ರಹ್ಮಚರ್ಯದ ಬಗ್ಗೆ ವಿಚಾರ ಮಾಡುವಂತೆ ಪ್ರೇರೇಪಿಸಿದರು. ಅಂತೆಯೇ ಕೊನೆಗೆ ಆಲೂರು ಗುರಪ್ಪನವರ ಪ್ರಭಾವಿ ಮಾತುಗಳಿಂದ ಬ್ರಹ್ಮ ಚರ್ಯವೇ ತನಗೆ ದಾರಿಯೆಂದು ನಿರ್ಧಾರಕ್ಕೆ ಬಂದು ನಿಷ್ಠಾವಂತ ಬ್ರಹ್ಮಚಾರಿಯಾಗಿ, ಶಿವಯೋಗಿಯಾಗಿ ಮುಂದೆ ಸಮಾಜ ಸೇವೆಯೇ ಪ್ರಮುಖ ಉದ್ದೇಶವಾಗಲು ಅನುವು ಮಾಡಿಕೊಟ್ಟಿತು. ಇಲ್ಲಿಯೂ ಸಹ ಪಂಚಾಕ್ಷರಿಯವರ ಪ್ರಮುಖ ನಿರ್ಧಾರ ಗಳಲ್ಲಿ ಸಮಾಜವೇ ಪ್ರಭಾವಪೂರ್ಣವಾದಂತ ಕಾರಕವಾಗಿ ಮೂಡಿ ಬಂದದ್ದನ್ನು ಗಮನಿಸಬಹುದು. ಅಂದರೇ ವ್ಯಕ್ತಿಯಿಂದ ಸಮಾಜವೋ ? ಸಮಾಜದಿಂದ ವ್ಯಕ್ತಿಯೋ !

## ಗಾನಯೋಗಿ ಪಂಚಾಕ್ಷರಿ ಗವಾಯಿ ಅವರು

---

ಪ॥ ಆರ್. ವಿ. ಶೇಷಾದ್ರಿಗವಾಯಿ

ಜಗತ್ತಿನ ವಿಭೂತಿ ಪುರುಷರೆಂದು ಗಣಿಸಲ್ಪಟ್ಟವರೆಲ್ಲ ಬಹುತೇಕ ಸಾಮಾನ್ಯ ಅಥವಾ ಬಡಕುಟುಂಬದಲ್ಲಿ ಜನಿಸಿದವರಾದರೂ, ಅವರು ಸಾಗಿಸಿದ ಜೀವನ ನಡೆಸಿದ ಬಾಳು ಅವರನ್ನು ದೊಡ್ಡದಾಗಿಸಿತು. ಮಹಮದ್ ಪೈಗಂಬರ್, ಶಂಕರಾಚಾರ್ಯ, ಬಸವಣ್ಣ, ವಾಲ್ಮೀಕಿ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಸ್ವಾಮಿ ಹರಿದಾಸ್, ಕಬೀರ್, ತುಲಸೀ, ಬಿಡಾರಂ ಕೃಷ್ಣಪ್ಪ ಮೊದಲಾದ ಮಹಾನುಭಾವರೆಲ್ಲ ಹುಟ್ಟಿನಿಂದ ದೊಡ್ಡವರಾಗದೇ ಅವರೆಸೆಗಿದ ಕಾರ್ಯ ವಿಶಾಲ ಮನೋಭಾವ, ಜೀವನ ನಿಷ್ಠೆ, ಶ್ರದ್ಧೆ, ಸ್ವಧರ್ಮಾಚರಣೆಗಳು ಅವರನ್ನು ಪೂಜ್ಯರನ್ನಾಗಿಸಿತು.

ಈ ದಿಸೆಯಲ್ಲಿ ಉಭಯ ಗಾಯನಾಚಾರ್ಯ, ಪಂಡಿತ ಗುರುವರ್ಯ ಪಂಚಾಕ್ಷರಿ ಗವಾಯಿಗಳು ಪ್ರಾತಃಸ್ಮರಣೀಯರಾಗಿದ್ದಾರೆ. ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಕಾಡಶೆಟ್ಟಿ ಹಳ್ಳಿಯಲ್ಲಿ ನೂರು ವರ್ಷಗಳ ಹಿಂದೆ ಜನಿಸಿದ ಪಂಚಾಕ್ಷರಿ ಗವಾಯಿಗಳು ಹುಟ್ಟು ಕುರುಡರು. ಗವಾಯಿಗಳ ಜನ್ಮನಾಮ ಗದಿಗಯ್ಯ. ಇವರಿಗೆ ಮೊದಲು ಜನಿಸಿದ ಗುರುಬಸಯ್ಯನವರೂ ಹುಟ್ಟು ಕುರುಡರು. ಜನಿಸಿದ ಇಬ್ಬರು ಮಕ್ಕಳೂ ಕುರುಡರೇ ಆದಾಗ ಆ ಬಡ ಜಂಗಮ ಕುಟುಂಬದ ತಂದೆ ತಾಯಿಗಳಿಗೆ ಆದ ದುಃಖ ಅವರ್ಣನೀಯ. ಆದರೇನು ಗತ್ಯಂತರವಿಲ್ಲ. ಏನೂ ತೋಚದಿದ್ದಾಗ, ಆಧಾರವಾಗಬೇಕಿದ್ದ ಈ ವಂಶದ ಕುಡಿಗಳೆರಡೂ ಹೀಗಾದಾಗ ಶಿವನೇ ಆ ತಂದೆ ತಾಯಿಗಳಿಗೆ ಆಧಾರನಾದ: ದಾರಿದೀಪವಾದ.

ಚಿಕ್ಕಂದಿನಲ್ಲೇ, ತಂದೆ ಹಾಡುತ್ತಿದ್ದ ಶಿವಶರಣರ ಕೃತಿಗಳು, ವಚನಗಳು ದಾಸರ ಪದಗಳು ಮಕ್ಕಳಿಗೆ ಕಂಠಪಾಠವಾಗಿ ಈ ಉಭಯರೂ ಹಾಡಲು ಪ್ರಾರಂಭಿಸಿದರೆ, ಜನರು ಇರುವೆಗಳಂತೆ ಮುತ್ತಿ ಮೈಮರೆತು ಕೇಳಿ ಆನಂದ ಪರವಶರಾಗುತ್ತಿದ್ದರು; ಎಲ್ಲ ಸಹಾಯ ಹಸ್ತಗಳೂ ಮುಂದ ಬಂದು ಈ ಕುರುಡ ಮಕ್ಕಳೇ ಆ ಬಡ ಕುಟುಂಬ ನಿರ್ವಹಣೆಗೆ ಆಧಾರ ಸ್ತಂಭರಾದರು. ಆದರೆ ಭಗವಂತನ ಇಚ್ಛೆಯೇ ಬೇರೆಯಾಗಿತ್ತು. ಒಮ್ಮೆ ಹಾನಗಲ್ ಮಠದ ಶ್ರೀ ಸ್ವಾ. ಪ್ರ. ಸ್ವಾ. ಕುಮಾರ ಮಹಾಸ್ವಾಮಿಗಳು ಭಕ್ತರ ಇಚ್ಛೆಯಂತೆ ಕಾಡಶೆಟ್ಟಿ ಹಳ್ಳಿಗೆ ದಯಮಾಡಿಸಿ

ದಾಗ ಈ ಕುರುಡು ಮಕ್ಕಳ ಗಾಯನ ಕೇಳಿ ಆ ಮಕ್ಕಳನ್ನು ತಮ್ಮ ವಶಕ್ಕೆ ತೆಗೆದು ಕೊಂಡು ಪಾಲನೆ ಪೋಷಣೆಗಳೊಡನೆ ಕರ್ನಾಟಕ ಸಂಗೀತವನ್ನು ಹಾಗೂ ಹಿಂದುಸ್ತಾನಿ ಸಂಗೀತವನ್ನು. ದಕ್ಷರಾದ ಮಹಾವಿದ್ವಾಂಸರಿಗೆ ಹೇರಳ ಹಣ ಕೊಟ್ಟು ಅಭ್ಯಾಸ ಮಾಡಿಸಿ ಉಭಯಗಾಯನ ವಾದನ ಪದ್ಧತಿಗಳಲ್ಲಿ ಇಬ್ಬರನ್ನೂ ವಿದ್ವಾಂಸರನ್ನಾಗಿ ಸಿದರು. ಏತನ್ಮಧ್ಯೇ ಗದಿಗೆಯ್ಯನವರ ಅಣ್ಣ ಗುರುಬಸಯ್ಯನವರು ಅಕಾಲ ಮರಣಕ್ಕೆ ತುತ್ತಾದರು. ಫಾಯದ ಮೇಲೆ ಬರೆಯಿಟ್ಟಂತೆ ಗದಿಗೆಯ್ಯನವರು ಅತ್ಯಂತ ದುಃಖಿಗಳಾಗಿ ದಿಕ್ಕುತೋಚದಂತಾದರೂ. ಅವರಲ್ಲಿ ಜನ್ಮಗತವಾಗಿ ಬಂದ ಮನಸ್ಥೈರ್ಯದ ಫಲವಾಗಿ ಧೈರ್ಯ ಹೊಂದಿ ಕಲೆಯಲ್ಲಿ ಮುನ್ನಡೆದು, ಶ್ರೀ ಹಾನ ಗಲ್ ಶ್ರೀಗಳ ಆಶೀರ್ವಾದದ ರಕ್ಷೆಯನ್ನು ಹೊತ್ತು ಉಭಯ ಗಾಯನಾಚಾರ್ಯ ರೆಂದು ಪ್ರಸಿದ್ಧಿ ಹೊಂದಿದರು. ಶ್ರೀ ಹಾನಗಲ್ ಶ್ರೀಗಳು ಗವಾಯಿಗಳ ವಿದ್ವತ್ತಿಗೆ ಮನಸಾರ ಮೆಚ್ಚಿ ಮಹಾಸಭೆಯೊಂದರಲ್ಲಿ ಗದಿಗೆಯ್ಯನವರಿಗೆ ಪಂಚಾಕ್ಷರಿ ಗವಾಯಿ ಗಳೆಂದು ನೂತನ ನಾಮಾಂಕಿತದಿಂದ ಸತ್ಕರಿಸಿ ಆಶೀರ್ವದಿಸಿದರು.

ಶ್ರೀ ಹಾನಗಲ್ ಶ್ರೀಗಳ ಇಚ್ಛೆಯಂತೆ ಪಂಚಾಕ್ಷರಿ ಗವಾಯಿಗಳು ಅಜನ್ಮ ಬ್ರಹ್ಮಚಾರಿಗಳಾಗಿ, ಶಿವಯೋಗಿಗಳಾಗಿ, ನಾದಬ್ರಹ್ಮರಾಗಿ, ಅನಾಥರಿಗೆ, ಅಂಗ ಹೀನರಿಗೆ, ಸಂಗೀತ ಶಿ[illegible] ಪೇಕ್ಷೆಯುಳ್ಳವರಿಗೆ, ಜಾತಿ ಭೇದಗಳೆನ್ನಿಸದೇ ಅನ್ನ ವಸ್ತ್ರ ವಸತಿಗಳ[illegible] ವಿದ್ಯಾದಾನ ಮಾಡಿ ಕಲೆಯನ್ನು ಸಂಪದ್ಭರಿತಗೊಳಿಸಿದರು. ಭಿಕ್ಷಾಟನೆಯನ್ನೇ ಜೀವನಾಧಾರವಾಗಿರಿಸಿಕೊಂಡು. ಸರ್ಕಾರದ ಯಾವ ಸಹಾಯ ವನ್ನು ಬಯಸದೇ ಸಂಗೀತ ದಾಸೋಹವನ್ನೇ ನಡೆಸಲು ಸಂಕಲ್ಪಿಸಿ 1914ರಲ್ಲಿ ಶ್ರೀ ಗವಾಯಿಗಳು "ಶ್ರೀ ಕುಮಾರೇಶ್ವರ ಕೃಪಾಪೋಷಿತ ಧರ್ಮಾರ್ಥ ಸಂಚಾಲಕ ಸಂಗೀತ ಮಹಾವಿದ್ಯಾಲಯ"ವನ್ನು ಸ್ಥಾಪಿಸಿ ನಾಡಿನ ತುಂಬೆಲ್ಲಾ ಗಾಯನ ಗಂಗೆ ಯನ್ನು ಹರಿಸಿದರು. ಇಂದು ಆ ಸಂಸ್ಥೆಗೆ 78 ವರ್ಷಗಳಾಗಿವೆ. ಶ್ರೀ ಪಂಚಾಕ್ಷರಿ ಗವಾಯಿಗಳ ಪಟ್ಟ ಶಿಷ್ಯರೂ, ಶಿವಯೋಗಿಗಳೂ, ಉಭಯ ಗಾಯನಾಚಾರ್ಯರೂ ತ್ರಿಭಾಷಿ ಕವಿಗಳೂ ಆದ ಡಾ॥ ಶ್ರೀ ಪುಟ್ಟರಾಜ ಗವಾಯಿಗಳೂ ತಮ್ಮ ಗುರುಗಳಂತೆ ತಾವೂ ಕಣ್ಣಿಲ್ಲದವರಾಗಿದ್ದರೂ ಗುರುಗಳ ಆಜ್ಞೆಯನ್ನು ಶಿರಸಾವಹಿಸಿ ನಡೆಸುತ್ತಾ ವಿದ್ಯಾದಾನ ಮಾಡುತ್ತಾ ಬರುತ್ತಿರುವುದನ್ನು ನೋಡಿದರೆ ಶ್ರೀ ಪಂಚಾಕ್ಷರಿ ಗವಾಯಿ ಗಳ ಸತ್ಯ ಸಂಕಲ್ಪದ ಅರಿವಾಗದಿರದು.

ಆ ಮಹಾ ವಿಭೂತಿ ಪಂಚಾಕ್ಷರಿಗಳ ಜನ್ಮ (1982-1992) ಶತಮಾನೋ ತ್ಸವ ಹೊರನಾಡಿನ ತುಂಬೆಲ್ಲಾ ನಡೆಯುತ್ತಲಿದೆ. ನಮ್ಮ ಸಂಗೀತ ನೃತ್ಯ ಅಕಾಡೆಮಿ ಯವರು ಕಳೆದ 20-5-1992 ರಂದು ಧಾರವಾಡದಲ್ಲಿ ಮಹಾ ವಿದ್ವಾಂಸರನ್ನೊಳ ಗೊಂಡ ವಿಚಾರ ಸಂಕಿರಣ ಹಾಗೂ ಸಂಗೀತ ಸಮ್ಮೇಳನವನ್ನು ನಡೆಸಿ ಆ ರಾಜ ಯೋಗಿಗೆ ತನ್ನ ಗೌರವಾರ್ಪಣೆ ಮಾಡಿದೆ. ಯುಗಪುರುಷ, ಗಾನಋಷಿ, ಸಂಗೀತ ಭಾಸ್ಕರನಿಗೆ ಕೋಟ್ಯೋಕೋಟಿ ಶಿರಸಾವಂದನೆಗಳು.